ಸಾಹಿತ್ಯದಿಂದ ಆಗುವ ಕೆಲಸ

(ಪ್ರೊಫೆಸರ್ ಟಿ. ಎಸ್. ವೆಂಕಣ್ಣಯ್ಯ ಜ್ಞಾಪಕೋಪನ್ಯಾಸ 1970)

ಮಾಸ್ತಿ ವೆಂಕಟೇಶ ಅಯ್ಯಂಗಾರ್

ಖಲೆ ಸಾರ್ವಜನಿಕ ವಿಚಾರ ಸಂಸ್ಥೆ
ಬೆಂಗಳೂರು-4

ಒಂದು ರೂಪಾಯಿ

ಸಾಹಿತ್ಯದಿಂದ ಆಗುವ ಕೆಲಸ

(ಪ್ರೊಫೆಸರ್ ಟಿ. ಎಸ್. ವೆಂಕಣ್ಣಯ್ಯ ಜ್ಞಾಪಕೋಪನ್ಯಾಸ 1970)

ಮಾಸ್ತಿ ವೆಂಕಟೇಶ ಅಯ್ಯಂಗಾರ್

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ
ಬೆಂಗಳೂರು-4

ಒಂದು ರೂಪಾಯಿ

ಮುನ್ನುಡಿ

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯು ಜನೋಪಯುಕ್ತವಾದ ವಿಷ ಗಳನ್ನು ಕುರಿತು ಕನ್ನಡದಲ್ಲಿ ಗ್ರಂಥಗಳನ್ನೂ ಲಘುಪತ್ರಿಕೆಗಳನ್ನೂ ಪ್ರಕಟಿಸಬೇಕೆ ಸಂಕಲ್ಪ ಮೊದಲಿನಿಂದಲೂ ಅದಕ್ಕೆ ಇದ್ದುಕೊಂಡಿದೆ. ಅದರಂತೆ ಇದಕ್ಕೆ ಹಿಂ ಒಂದೆರಡು ಪ್ರಕಟನೆಗಳನ್ನು ಮಾಡಿದ್ದಾಗಿದೆ. ಈಗ ಆ ಉದ್ದೇಶವನ್ನು ಇನ ಬೇಗ ಬೇಗ ಸಾಧಿಸಬೇಕೆಂದು ಆಲೋಚನೆ ಮಾಡಿದೆ. ದೇಶದ ಮಹಾಜನ ಈ ಸಂಸ್ಥೆಗೆ ಈಚೀಚೆಗೆ ದೊರಕಿಸಿರುವ ಸಹಾಯದಿಂದ ಈ ಆಲೋಚನೆ ಈ ಸಾಧ್ಯ ತೋರುತ್ತದೆ.

ಶ್ರೀ ಟಿ. ಎಸ್. ವೆಂಕಣ್ಣಯ್ಯನವರ ಜ್ಞಾಪಕಾರ್ಥವಾಗಿ ಶ್ರೀಮಾನ್ ಜಿ. ರಾಜರತ್ನಂ ಅವರು ಗೋಖಲೆ ಸಂಸ್ಥೆಯಲ್ಲಿ ಸ್ಥಾಪಿಸಿರುವ ಉಪನ್ಯಾಸ ದತ್ತಿ ಆಶ್ರಯದಲ್ಲಿ ಶ್ರೀಮಾನ್ ಮಾಸ್ತಿ ವೆಂಕಟೇಶಯ್ಯಂಗಾರ್ಯರವರು ತಾ|| 21-2-19 ರಲ್ಲಿ ಕೊಟ್ಟ ಉಪನ್ಯಾಸವನ್ನು ಈ ಪುಸ್ತಕದಲ್ಲಿ ಪ್ರಕಟಿಸಿದೆ.

ಡಾ|| ವೆಂಕಟೇಶಯ್ಯಂಗಾರ್ಯರವರ ಸಾಹಿತ್ಯ ಪ್ರಸಿದ್ಧಿ ಎಲ್ಲರಿಗೂ ತಿ ದ್ದಾಗಿದೆ. ಅವರು ಸಾಹಿತ್ಯ ನಿರ್ಮಾಪಕರೂ ಹೌದು; ಸಾಹಿತ್ಯ ವಿಮರ್ಶಕ ಹೌದು. ಮತ್ತು ಸಾಹಿತ್ಯದಲ್ಲಿ ಹೇಗೆಯೋ ಲೌಕಿಕ ವ್ಯವಹಾರದಲ್ಲಿಯೂ ಹಾಗೆ ದಕ್ಷರು ಮತ್ತು ಅನುಭವಿಗಳು. ಇಂಥ ಮಹನೀಯರು ನಮಗೆ ಮಾಡಿರು ಉಪಕಾರಕ್ಕಾಗಿ ನಾವು ಮನಃಪೂರ್ವಕವಾಗಿ ವಂದನೆ ಸಲ್ಲಿಸುತ್ತೇವೆ. ಈ ಪ್ರಬಂಧ ಸಮಸ್ತರಿಗೂ ಪ್ರಿಯವಾದೀತೆಂದು ನಾನು ನಂಬಿದ್ದೇನೆ.

ಕನ್ನಡ ಮಹಾಜನ ಈ ಸಂಸ್ಥೆಗೂ ಅದರ ಪ್ರಕಟನ ಕಾರ್ಯಕ್ಕೂ ಪ್ರೋತ್ಸಾ ಕೊಡಬೇಕೆಂದು ಬೇಡುತ್ತೇವೆ.

ಬೆಂಗಳೂರು-೪ ಡಿ. ವಿ. ಜಿ.
15-4-1971 ಗೌ|| ಕಾರ್ಯದರ್ಶಿ, ಗೋ|| ಸಾ|| ವಿ|| ಸಂ

ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯನವರು

ಶ್ರೀಮಾನ್ ಟಿ. ಎಸ್ ವೆಂಕಣ್ಣಯ್ಯನವರು 1-10-1885 ರಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟಿನ ಚಳ್ಳಕೆರೆ ತಾಲ್ಲೂಕು ತಳುಕು ಗ್ರಾಮದಲ್ಲಿ ಹುಟ್ಟಿದರು. ಅವರ ತಂದೆ ಸುಬ್ಬಣ್ಣನವರು ವಿದ್ವಾಂಸರು. ಯಕ್ಷಗಾನ ಮೊದಲಾದ ಕಾವ್ಯಗಳನ್ನು ರಚಿಸಿ ಆ ಪ್ರಾಂತದ ಜನದಲ್ಲಿ ಪ್ರಚಾರಮಾಡಿದವರು. ನಾಟಕ ಅಭ್ಯಾಸ ಮಾಡಿಸಿದವರು.

ವೆಂಕಣ್ಣಯ್ಯನವರು ಚಳ್ಳಕೆರೆಯಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆ ಕೊಟ್ಟು, ಮುಂದೆ ಚಿತ್ರದುರ್ಗದ ಹೈಸ್ಕೂಲಿನಲ್ಲಿ ಓದು ಮುಗಿಸಿ, 1904ರಲ್ಲಿ ಎಫ್.ಎ. ಪರೀಕ್ಷೆಗೆ ಓದಲು ಮೈಸೂರಿಗೆ ಬಂದರು. ಆ ಪರೀಕ್ಷೆಗಾಗಿ ಒಂದು ವರ್ಷ ಬಳ್ಳಾರಿಯ ವಾರ್ಡ್ಲಾ ಕಾಲೇಜಿನಲ್ಲೂ ಓದಿದರು. ಆಮೇಲೆ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಚರಿತ್ರೆ, ಅರ್ಥಶಾಸ್ತ್ರಗಳನ್ನು ತೆಗೆದುಕೊಂಡು ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ (1909), ಬೊಂಬಾಯಿಗೆ ಎಲ್‌ಎಲ್.ಬಿ. ಪರೀಕ್ಷೆಗೆ ಓದಲು ಹೋದರು. ಅಲ್ಲಿ ಕೆಲವು ಕಾಲ ಜನರಲ್ ಪೋಸ್ಟಾಫೀಸಿನಲ್ಲಿ ಗುಮಾಸ್ತರಾಗಿದ್ದರು. ಎಲ್‌ಎಲ್.ಬಿ.ಯ ಮೊದಲನೆಯ ಪರೀಕ್ಷೆಯಾಗಿ ಎರಡನೆಯ ಪರೀಕ್ಷೆಗೂ ಕುಳಿತಿದ್ದರು. ಆಗ ಎಂ.ಎ. ಪದವಿ ಪಡೆಯಬೇಕೆಂಬ ಸಂಕಲ್ಪ ಹುಟ್ಟಿ ಮೈಸೂರಿಗೆ ಬಂದು ಪಂಡಿತ ಶ್ರೀ ಎಸ್. ತಿಮ್ಮಪ್ಪಯ್ಯ ಶಾಸ್ತ್ರಿಗಳವರಲ್ಲಿ ಕನ್ನಡವನ್ನೂ ಶ್ರೀಮಾನ್ ರಾಳ್ಲಪಲ್ಲಿ ಅನಂತಕೃಷ್ಣಶರ್ಮರವರಲ್ಲಿ ತೆಲುಗನ್ನೂ ವ್ಯಾಸಂಗ ಮಾಡಿ, ಖಾಸಗಿಯಾಗಿ ಪರೀಕ್ಷೆ ಕೊಟ್ಟು, ಉತ್ತೀರ್ಣರಾದರು (1914). ಅನಂತರ ಧಾರವಾಡದ ಮಿಷನ್ ಹೈಸ್ಕೂಲಿನಲ್ಲಿಯೂ, ಬೆಂಗಳೂರು ದಂಡಿನಲ್ಲಿರುವ ಸೇಂಟ್ ಜೋಸೆಪ್ಸ್ ಕಾಲೇಜಿನಲ್ಲಿಯೂ (1916) ಸಹೋಪಾಧ್ಯಾಯರಾಗಿದ್ದು, 1917ರಲ್ಲಿ ದೊಡ್ಡಬಳ್ಳಾಪುರದ ಕನ್ನಡ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದು, ಮುಂದೆ ಬೆಂಗಳೂರಿನ ಇಂಗ್ಲಿಷ್ ಹೈಸ್ಕೂಲು, ಸೆಂಟ್ರಲ್ ಕಾಲೇಜುಗಳಲ್ಲಿ ಮೇಲಕ್ಕೆ ಬಂದು, ಮಹಾರಾಜಾ ಕಾಲೇಜಿನಲ್ಲಿ (1927) ಕನ್ನಡ ಪ್ರೊಫೆಸರ್ ಆದರು.

ಅವರು ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷಾ ಸಾಹಿತ್ಯಗಳನ್ನು ಆಳವಾಗಿಯೂ ವಿಪುಲವಾಗಿಯೂ ವ್ಯಾಸಂಗ ಮಾಡಿದ್ದರು. ಜೊತೆಗೆ ತೆಲುಗು, ಬಂಗಾಳಿ, ತಮಿಳು ಭಾಷೆಗಳ ಪರಿಚಯವೂ ಅವರಿಗಿತ್ತು. ಶ್ರೀ ರಾಮಕೃಷ್ಣ ಮಠಕ್ಕಾಗಿ ಬಂಗಾಳಿ ಗ್ರಂಥಗಳ ಆಧಾರದ ಮೇಲೆ ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆಯನ್ನು ಬರೆದರು. 'ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ'ದ ಒಂದು ಭಾಗವನ್ನು ಭಾಷಾಂತರ ಮಾಡಿದರು. ರವೀಂದ್ರನಾಥ ಠಾಕೂರರ ಸಾಹಿತ್ಯ ವಿಷಯಕವಾದ ಪ್ರಬಂಧಗಳನ್ನು ಕನ್ನಡಿಸಿ (ಪ್ರಾಚೀನ ಸಾಹಿತ್ಯ) ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟಿಸಿದರು. ಅವರಿಗೆ ಉಪನಿಷತ್ತುಗಳ ಪರಿಚಯವಿತ್ತು. ವಾಲ್ಮೀಕಿರಾಮಾಯಣ, ಅಧ್ಯಾತ್ಮರಾಮಾಯಣ, ಭಗವದ್ಗೀತೆಗಳನ್ನು ಗದ್ಗದದಿಂದ ಕಣ್ಣೀರು ಹಾಕುತ್ತ ಪಾರಾಯಣಮಾಡುತ್ತಿದ್ದದ್ದುಂಟು. ಹರಿಶ್ಚಂದ್ರ ಕಾವ್ಯಸಂಗ್ರಹ, ಕಾದಂಬರೀ ಸಂಗ್ರಹ, ಬಸವರಾಜ ದೇವರ ರಗಳೆಗಳನ್ನು ಶೋಧನೆ ಮಾಡಿ, ಸಂಪಾದಿಸಿ, ಕಾದಂಬರೀ ಸಂಗ್ರಹಕ್ಕೂ ಬಸವರಾಜ ದೇವರ ರಗಳೆಗೂ ಸಾರವತ್ತಾದ ಉಪೋದ್ಘಾತಗಳನ್ನು ಬರೆದಿದ್ದಾರೆ. 'ಕನ್ನಡ ಕೈಪಿಡಿ'ಗೆ ಹಳಗನ್ನಡ ವ್ಯಾಕರಣದ ಒಂದು ಭಾಗವನ್ನೂ, ಭಾಷಾ ಚರಿತ್ರೆಯ ಭಾಗವನ್ನೂ ಬರೆದಿದ್ದಾರೆ. ಸಾಹಿತ್ಯ ಪರಿಷತ್ತು

ಪ್ರಕಟಿಸಿದ ಪಂಪಭಾರತದ ಸಂಪಾದನ ಕಾರ್ಯದಲ್ಲಿಯೂ, ಓರಿಯಂಟಲ್ ಲೈ
ಪ್ರಕಟಿಸಿದ ಕುಮಾರವ್ಯಾಸ ಭಾರತದ ಸಂಪಾದನ ಕಾರ್ಯದಲ್ಲಿಯೂ ಸಹ
ದರು. ಸಿದ್ಧರಾಮ ಪುರಾಣವನ್ನು ಶೋಧಿಸಿ ಅಚ್ಚಿಗೆ ಸಿದ್ಧಮಾಡಿದರು. ಪ್ರ
ಕರ್ಣಾಟಕಕ್ಕೆ ಸಂಪಾದಕರಾಗಿದ್ದರು.

ಅವರು ಮೇಧಾವಿಗಳು. ನಿಷ್ಕೃಷ್ಟಜ್ಞಾನವುಳ್ಳವರು. ಅವರಿಗೆ ಇದ್ದ ಸಾಹಿ
ಅಂತರ್ದೃಷ್ಟಿ (Feel for literature), ಕಾವ್ಯವಿಮರ್ಶನ ಸೂ
ಅಸಾಧಾರಣವಾದದ್ದು. ಅವರ ಕಂಠಸಂಪತ್ತು ಸಂಗೀತಕ್ಕೆ ತಕ್ಕಂತೆ ಇದ್ದುದ
ಅವರು ಕಾವ್ಯವನ್ನೋದುವುದೇ ಒಂದು ಸೊಗಸಾಗಿತ್ತು.

ಅವರು ವಿದ್ಯಾರ್ಥಿಗಳಲ್ಲಿ ತಂದೆಯಂತೆ ನಡೆದುಕೊಂಡು ಅವರ ಜ್ಞಾನಾಭಿ
ಯೋಗಕ್ಷೇಮ, ಸಚ್ಚಾರಿತ್ರಗಳಲ್ಲಿಯೇ ಸದಾ ಗಮನವಿಟ್ಟವರು. ಮುಖ್ಯ
ಸಾಹಿತಿಗಳನ್ನು ತಯಾರುಮಾಡುವುದರಲ್ಲಿ, ಅವರನ್ನು ಹುರುಪುಗೊಳಿಸುವು
ಒಂದುಗೂಡಿಸುವುದರಲ್ಲಿ, ಸಾಹಿತ್ಯ ಪ್ರಚಾರದಲ್ಲಿ ಮಗ್ನರಾಗಿದ್ದರೇ ಹೊ
ಎಂದಿಗೂ ಕೀರ್ತಿಗಾಗಿ ಹಂಬಲಿಸಿದವರಲ್ಲ. ಅವರಿಗೆ ಕನ್ನಡದ ಮೇಲಿದ್ದದ್ದು
ಯಿಲ್ಲದ ಉತ್ಸಾಹ. ಅವರು ಐಶ್ವರ್ಯವಂತರಾಗಿಲ್ಲದಿದ್ದರೂ ಹತ್ತಾರು ವ
ಕಷ್ಟಕಾಲದಲ್ಲಿ ಸಹಾಯ ಮಾಡುತ್ತಿದ್ದರು.

ವೆಂಕಣ್ಣಯ್ಯನವರು ಆಗಡಿಯ ಶೇಷಾಚಲ ಸಾಧುಗಳ ಪ್ರಭಾವಕ್ಕೆ ವ
ದ್ದರು. ಆ ಸಾಧುಗಳ ಅಂತರಂಗ-ಬಹಿರಂಗ ಸಮನ್ವಯ ವೆಂಕಣ್ಣಯ್ಯನವರ
ಯನ್ನೂ ಮೆಚ್ಚುಗೆಯನ್ನೂ ಸಂಪಾದಿಸಿತ್ತು. ಅವರ ಜೀವನವನ್ನು ರೂಪು
ಸಿತು. ವೆಂಕಣ್ಣಯ್ಯನವರು ಮಿತವಾಗಿ ಆಚಾರಶೀಲರು. ಅವರಿಗೆ ಪ್ರಾ
ಪ್ರಮಾಣದಲ್ಲಿ ಆಶ್ರಯ; ಸದ್ಯಃ ಪ್ರಯೋಗದಲ್ಲಿ ತಾತ್ಪರ್ಯ. ಸಾಹಿತ್ಯದಲ್ಲಾ
ಸಮಾಜ ವ್ಯವಸ್ಥೆಯಲ್ಲಾಗಲಿ, ಸಂಪ್ರದಾಯದಲ್ಲಾಗಲಿ, ನವೀಕರಣವಾಗಬ
ಆದರೆ ವಿಚಾರಪೂರ್ವಕವಾಗಿ ಆಗಬೇಕು; ಇದು ಅವರ ಮನೋಗತ. ಅ
ಜೀವನದಲ್ಲಿ ಸಂತೋಷವುಂಟು; ಭೋಗಭಾಗ್ಯಗಳಲ್ಲಿ ಉತ್ಸಾಹವುಂಟು.
ಜಗತ್ತು ಅಶಾಶ್ವತವೆಂಬ ಸ್ಮರಣೆ, ಆತ್ಮಪಾರಮ್ಯದ ಭಾವನೆ, ಅವರ ಸಂತ
ಉತ್ಸಾಹಗಳನ್ನು ಮಿತಿಯಲ್ಲಿರಿಸಿತ್ತು. ವೆಂಕಣ್ಣಯ್ಯನವರ ಅಂತರಂಗ ವಿಶೇಷ
ಜೀವಶೋಧನೆ, ಜೀವಸಮುನ್ನತಿ.

ಅವರು ಇರುವ ತನಕ ಒಳ್ಳೆಯವರಾಗಿದ್ದು 'ತಳುಕಿನ ವೆಂಕಣ್ಣಯ್ಯ
ತಳುಕಿಲ್ಲ' ಎನಿಸಿಕೊಂಡು ಅವರ ಸ್ನೇಹವೇ ಒಂದು ಸಂತೋಷವೆಂದುಕೊಳ್ಳ
ಜನರ ಪ್ರೀತಿಯನ್ನು ಸಂಪಾದಿಸಿ ನಯವಾದ, ನವಿರಾದ ಸಾತ್ವಿಕಜೀವನ
ನಡಸಿ 24-2-1939ರಲ್ಲಿ ಕಣ್ಮರೆಯಾದರು.

ವೆಂಕಣ್ಣಯ್ಯನವರ ಬರವಣಿಗೆ, ಅದಕ್ಕಿಂತ ಹೆಚ್ಚಾಗಿ ಅವರ ಮಾತು,
ಮಾತಿಗಿಂತ ಅವರ ನಡತೆ, ಅವರ ನಡತೆಗಿಂತಲೂ ಅವರ ಗುಣ—ಇವು ಅ
ಬಲ್ಲವರ ಹೃದಯದಲ್ಲಿ ಮೆಚ್ಚಿಗೆ ಪಡೆದು ನಿಂತಿವೆ.

ಇಂಥ ಮಹನೀಯರ ಚರಿತ್ರೆ, ಅವರನ್ನು ಕಾಣುವ ಪುಣ್ಯವನ್ನು ಪಡೆ
ರಿಗೂ ಸಹ, ಮನಃಪ್ರಸಾದವನ್ನುಂಟುಮಾಡಿ ಮಾರ್ಗದರ್ಶಕವಾಗುತ್ತದೆ.

(ಆಧಾರ: ಪ್ರಬುದ್ಧ ಕರ್ಣಾ

ಸಾಹಿತ್ಯದಿಂದ ಆಗುವ ಕೆಲಸ

ಮಾಸ್ತಿ ವೆಂಕಟೇಶ ಅಯ್ಯಂಗಾರ್

— ೦ —

ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆಯಲ್ಲಿ ೨೧-೨-೧೯೭೦ರ ದಿನ ಮಾಡಿದ ತಳಕಿನ ವೆಂಕಣ್ಣಯ್ಯ ಜ್ಞಾಪಕೋಪನ್ಯಾಸ.

೧

ಶ್ರೀಮಾನ್ ಗುಂಡಪ್ಪನವರೆ, ತಾಯದಿರೇ, ಸೋದರರೇ, ಈ ದಿನ ನಾನು ತಮ್ಮ ಸನ್ನಿಧಿಯಲ್ಲಿ ನನಗೆ ಬಹುಪ್ರಿಯವಾದ ಒಂದು ಕೆಲಸವನ್ನು ಮಾಡಲು ನಿಂತಿದ್ದೇನೆ. ಸಭೆಯನ್ನು ಆರಂಭಿಸಿದ ತಮ್ಮ ಮಾತಿನಲ್ಲಿ ಶ್ರೀ ಗುಂಡಪ್ಪನವರು ಇಂದಿನ ಕಾರ್ಯಕ್ರಮ ಮೂರು ಕಾರಣದಿಂದ ತಮಗೆ ಬಹು ಇಷ್ಟ ಎಂದು ಅಪ್ಪಣೆ ಕೊಡಿಸಿದರು. ಇಂದಿನ ಉಪನ್ಯಾಸ ತಳಕಿನ ವೆಂಕಣ್ಣಯ್ಯನವರ ಜ್ಞಾಪಕಾರ್ಥವಾಗಿ ಏರ್ಪಟ್ಟಿದೆ ಎನ್ನುವುದು ಮೊದಲ ಕಾರಣ. ಇದನ್ನು ನಡೆಸಲು ಅಪೇಕ್ಷಿಸಿರುವವರು ಶ್ರೀ ರಾಜರತ್ನಂ ಎನ್ನುವುದು ಎರಡನೆಯ ಕಾರಣ. ಭಾಷಣ ಮಾಡುತ್ತಿರುವವನು ನಾನು ಎನ್ನುವುದು ಮೂರನೆಯ ಕಾರಣ. ಅವರಂತೆ ನನಗೂ ಈ ಕೆಲಸ ಮಾಡುವುದರಲ್ಲಿ ಸಂತೋಷ ಇದೆ; ಮತ್ತು ಆ ಸಂತೋಷಕ್ಕೆ ಮೂರು ಕಾರಣ ಇವೆ. ಅವುಗಳಲ್ಲಿ ಮೊದಲನೆಯದು ಈ ಉಪನ್ಯಾಸ ನಡೆಯುತ್ತಿರುವುದು ಶ್ರೀ ಗುಂಡಪ್ಪನವರ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಎನ್ನುವುದು; ವೆಂಕಣ್ಣಯ್ಯನವರ ಜ್ಞಾಪಕಾರ್ಥ, ರಾಜರತ್ನಂ ಅವರ ದತ್ತಿ, ಎಂಬವು ನನ್ನ ದೃಷ್ಟಿಯಿಂದಲೂ ಅನ್ವಯಿಸುವ ಇನ್ನೆರಡು ಕಾರಣ.

ಶ್ರೀ ವೆಂಕಣ್ಣಯ್ಯನವರು ನನಗೆ ಅತ್ಯಂತ ಪ್ರಿಯರಾದ ಮಿತ್ರರೂ ಹಿರಿಯ ಸೋದರರೂ ಆಗಿದ್ದರು. ಶ್ರೀ ಗುಂಡಪ್ಪನವರೂ ಹಾಗೆಯೇ ಅತ್ಯಂತ ಪ್ರಿಯರಾದ ಮಿತ್ರರು, ಹಿರಿಯ ಸೋದರರು. ಶ್ರೀ ರಾಜರತ್ನಂ ಅತ್ಯಂತ ಪ್ರಿಯರಾದ ಮಿತ್ರರು, ಕಿರಿಯ ಸೋದರರು. ಶ್ರೀ ಗುಂಡಪ್ಪನವರು ನನ್ನ ವಿಷಯಕ್ಕೆ ತುಂಬ ಅಕ್ಕರೆಯ ಮಾತನ್ನಾಡಿದರು. ಈ ಬಗ್ಗೆ ನಾನು ವಂದನೆ ಸಲ್ಲಿಸುತ್ತೇನೆ.

ಶ್ರೀ ವೆಂಕಣ್ಣಯ್ಯನವರು ತಮ್ಮ ಜೀವನವನ್ನು ಉನ್ನತ ಭಾವನೆಯಿ
ಕನ್ನಡಕ್ಕಾಗಿ ಮುಡಿಪುಮಾಡಿದರು. ಅವರ ಆ ಜೀವನವನ್ನು ನಾನು ವ
ಬೇಕಾಗಿಲ್ಲ. ನನಗೆ ಅವರ ಪರಿಚಯು ಸುಮಾರು ಅರವತ್ತೆರಡು ವರ್ಷಗಳ ಹಿ
ಹೈಸ್ಕೂಲಿನ ಕೊನೆಯ ವರ್ಷ, ಕಾಲೇಜಿನ ಮೊದಲ ಎರಡು ವರ್ಷ, ನ
ಮೈಸೂರಿನಲ್ಲಿ ಇದ್ದ ದಿನಗಳಲ್ಲಿ ದೊರಕಿತು. ಇವರು ಆಗ ಎರಡು ವರ್ಷ ಮೇ
ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿ. ಸಾಮಾನ್ಯವಾಗಿ ವಿದ್ಯಾರ್ಥಿಗಳ
ಸಭೆಗಳಲ್ಲಿ ಕಾಣುತ್ತಿದ್ದರು. ಆಗಲೂ ಅವರ ಮೂರ್ತಿ ನೂರು ಜನರ
ನಿಂತಾಗ ಮೇಲೆ ಎದ್ದು ಕಾಣುತ್ತಿತ್ತು. ಆ ದಿನಕ್ಕೇ ಆ ಮೂರ್ತಿ ಪ್ರ
ವಾಗಿತ್ತು. ನಾನು ಇಂಗ್ಲೀಷಿನಲ್ಲಿ ಗಟ್ಟಿಗನೆಂದು ಸಭೆಗಳಲ್ಲಿ ಮಾತನ
ತ್ತಿದ್ದೆನು. ಗಟ್ಟಿಗ ಎಂದರೇನು, ಪದಗಳಿಗೆಂದು ತಡೆಯದೆ ಧಾರಾಳ
ಮಾತನಾಡುವುದು. ಒಂದು ಬಾರಿ ಸಭೆ ಮುಗಿದಮೇಲೆ ವೆಂಕಣ್ಣಯ್ಯನವರು ಹ
ಬಂದು, "ಚೆನ್ನಾಗಿ ಮಾತನಾಡಿದಿರಿ" ಎಂದು ಪ್ರೋತ್ಸಾಹದ ಮಾತನ್ನಾಡಿ
ಇದು ಅವರ ಸ್ವಭಾವ. ಎರಡು ವರ್ಷ ಬಿಟ್ಟು ನಾನು ಬಿ.ಎ. ಪರೀಕ್ಷೆ
ಮದರಾಸಿಗೆ ಹೋದಾಗ ವೆಂಕಣ್ಣಯ್ಯನವರು ಎಂ.ಎ. ಪರೀಕ್ಷೆಗೆಂದು
ಬಂದಿದ್ದರು. ನನಗೆ ಅವರ ನೆನಪಿತ್ತು. ಅವರಿಗೆ ನನ್ನ ನೆನಪುಂಟೋ ಇಲ್ಲ
ನನಗೆ ಸಂದೇಹ. ಆದರೆ ದೂರದಿಂದ ನನ್ನನ್ನು ನೋಡಿದ ಅವರು ನಾನಿರುವ
ಬಂದರು. ನಾನೂ ಅವರ ಬಳಿಗೆ ನಡೆದೆನು. ಇಬ್ಬರೂ ವಿಶ್ವಾಸದ ಮಾತನ್ನಾಡಿ
ಇದಾದ ಹಲವು ವರ್ಷದ ಮೇಲೆ ನಾನು ಕೆಲಸಕ್ಕೆ ಸೇರಿದ ಬಳಿಕ ನಾವು
ನ್ನೊಬ್ಬರು ಕಂಡೆವು. ನನ್ನ ಮೊದಲ ಪುಸ್ತಕವನ್ನೋದಿ ಇವರು ಒಪ್ಪಿಕೊಂ
೧೯೨೧ರಲ್ಲಿ ನಾನು ಬಿನ್ನಹದ ಹಾಡುಗಳನ್ನು ಬರೆಯುತ್ತಿದ್ದ ದಿನಗಳಲ್ಲಿ
ಇವರ ಬಾಂಧವ್ಯ ಬಹು ನಿಕಟವಾಯಿತು. ಅಲ್ಲಿಂದಾಚೆಗೆ ಇವರು ಸಾಹಿತ್ಯ
ಯಲ್ಲಿ ನನಗೆ ಎಲ್ಲ ಹೊತ್ತೂ ಜೊತೆಗೆ ನಿಂತು ನಿರಂತರವಾಗಿ ಪ್ರೋತ್ಸಾಹ ನೀಡಿ
ಮುದ್ದಣನ ಶ್ರೀ ರಾಮಾಶ್ವಮೇಧದ ಪ್ರಶಂಸೆಯನ್ನು ಬರೆದುಕೊಡಲು ಒಪ್ಪಿ ನ
ದೇಹಸ್ಥಿತಿ ಸರಿಯಾಗಿಲ್ಲದೆ ತಡಮಾಡಿದಾಗ, "ನೀವು ಮಲಗಿದ್ದೇ ನಿಮ್ಮ ಮಾ
ಹೇಳಿ, ನಾನು ಬರೆದುಕೊಳ್ಳುತ್ತೇನೆ" ಎಂದರು. "ಇದು ನಿಮಗೆ ಕೆಲಸ
ಎಂದು ನಾನು ಬಿನ್ನೈಸಿದೆನು. ಅವರು "ಆ ಸಂಕೋಚ ಬೇಡ" ಎ
ಒತ್ತಾಯ ಮಾಡಿ ನನ್ನಿಂದ ಆ ಉಪನ್ಯಾಸವನ್ನು ಹೇಳಿಸಿ ತಾವು ಬರೆದುಕೆ
ಹಸ್ತಪ್ರತಿಯನ್ನು ಒಯ್ದು ಅಚ್ಚಿಗೆ ಕೊಟ್ಟರು. ಈ ದೊಡ್ಡ ಚೇತನದ ಈ
ಸೌಜನ್ಯ ಎಷ್ಟು ಎಂದು ಹೇಳೋಣ? ಮಿಲ್ಟನ್ ಕವಿಯನ್ನು ಕುರಿತು
ವರ್ತ್ ಹೇಳಿದ ಕೆಲವು ವಾಕ್ಯಗಳು ಇವರ ಹಿರಿಯ ಜೀವಕ್ಕೆ ಸಂಪೂರ್ಣ
ಹೊಂದುತ್ತವೆ.

Thy soul was like a star, and dwelt apart......
So didst thou travel on life's common way,
In cheerful godliness, and yet thy heart
The lowliest duties on herself did lay.

ಕನ್ನಡದ ಸೇವೆ ಎಂದರೆ ಆಯಿತು ; ಅದು ಯಾವುದೂ ಇವರಿಗೆ ತಾವು ಮಾಡ ಬಹುದಾದ ಕೆಲಸ ಎಂದು ಕಾಣುತ್ತಿತ್ತು.

ಇದರ ಕಾರಣ, ಸಾಹಿತ್ಯವನ್ನು ಕುರಿತು ಇವರಿಗೆ ಇದ್ದ ಉನ್ನತ ಭಾವ. ನಮ್ಮ ಸಾಹಿತ್ಯದಲ್ಲಿ ಹೊಸ ಯುಗವೊಂದು ಆರಂಭವಾಗಿದೆಯೆನ್ನುವುದನ್ನು ಇವರು ಕಂಡು ಕೊಂಡರು. ಅದು ಚೆನ್ನಾಗಿ ಬೆಳಗುವಂತೆ ಎಲ್ಲರೂ ಸೇರಿ ದುಡಿಯಬೇಕು ಎನ್ನುವುದು ಇವರ ಮನಸ್ಸಿಗೆ ಮುಟ್ಟಿತ್ತು. ಜನಜೀವನದಲ್ಲಿ ಸಾಹಿತ್ಯದಿಂದ ಆಗ ಬೇಕಾದ ಕೆಲಸ ಬಹು ಹಿರಿಯದೆಂದು ಇವರು ಕಂಡಿದ್ದರು, ನಂಬಿದ್ದರು. ಆದ್ದ ರಿಂದಲೇ ನಾನು ಅವರ ಜ್ಞಾಪಕಾರ್ಥವಾಗಿ ಮಾಡುತ್ತಿರುವ ಈ ಉಪನ್ಯಾಸಕ್ಕೆ **'ಸಾಹಿತ್ಯದಿಂದ ಆಗುವ ಕೆಲಸ'** ಎಂಬ ವಿಷಯವನ್ನು ಆರಿಸಿಕೊಂಡಿದ್ದೇನೆ.

೨

'ಸಾಹಿತ್ಯದಿಂದಾಗುವ ಕೆಲಸ' ಎಂದಿದೆ. 'ಸಾಹಿತ್ಯ ಮಾಡುವ ಕೆಲಸ' ಎಂದು ಅಲ್ಲ. ಈ ವಿವೇಚನೆಗೂ ವೆಂಕಣ್ಣಯ್ಯನವರು ಆಡುತ್ತಿದ್ದ ಒಂದು ಮಾತು ಕಾರಣ. ವೆಂಕಣ್ಣಯ್ಯನವರು ಹರೆಯದಲ್ಲಿ ಅಗಡಿಯ ಶ್ರೀ ಶೇಷಾಚಲ ಸಾಧುಗಳ ವಾತ್ಸಲ್ಯದ ವಸ್ತು ಆಗಿ ಕೆಲವುಕಾಲ ಬೆಳೆದರು. ಆಗಿನ ದಿನಗಳಲ್ಲಿ ಸಾಧುಗಳು ಆಗಾಗ ಹೇಳುತ್ತಿದ್ದ ಒಂದು ಮಾತನ್ನು ಇವರು ನೆನೆಯುವರು. ಶಿಷ್ಯರು, ಭಕ್ತರು, ಬಂದವರು, ಗುರುಗಳ ಅಡಿಗೆರಗಿ ಕುಳಿತು, "ಉಪದೇಶ ಮಾಡ ಬೇಕು" ಎಂದು ಕೇಳುವರಂತೆ. ಗುರುಗಳು, "ಉಪದೇಶ ಆಗಬೇಕು. ಅದನ್ನು ಮಾಡುವುದು ಹೇಗೆ?" ಎನ್ನುವರು. ವೆಂಕಣ್ಣಯ್ಯನವರು ಪಕ್ಕದಲ್ಲಿ ಕುಳಿತಿದ್ದರೆ ಇವರ ಕಡೆಗೆ ತಿರುಗಿ, "ಏನು ವೆಂಕೋಬರಾವ್, ಏನೆನ್ನುತ್ತೀರಿ?" ಎನ್ನುವರು. ಬಂದವರು ಗುರುವನ್ನು ನೋಡಿ, ಅವರು ಆಡುತ್ತಿದ್ದ ಮಾತು, ಬಾಳುತ್ತಿದ್ದ ಕ್ರಮ, ನಡೆದುಕೊಳ್ಳುತ್ತಿದ್ದ ರೀತಿ, ಇವನ್ನು ನೋಡಿ, ಗುರುವಿನ ಇಂಗಿತವನ್ನು ಗ್ರಹಿಸಿ, ಬದುಕುವುದಕ್ಕೆ ತಮಗೆ ದಾರಿ ಯಾವುದು ಎಂಬುದನ್ನು ಕಂಡುಕೊಳ್ಳಬೇಕು. ಕಂಡು ಕೊಳ್ಳಬಲ್ಲರೇ, ಅದನ್ನು ಬಿಡಿಸಿ ಹೇಳಬೇಕಾದದ್ದಿಲ್ಲ. ಕಂಡುಕೊಳ್ಳಲಾರರೇ, ಬಿಡಿಸಿ ಹೇಳಿದರೂ ಅದು ಕಾಣುವುದಿಲ್ಲ. ಸಾಹಿತ್ಯದ ಮಾತೂ ಅಷ್ಟೇ. ಕಾವ್ಯದ ಇಂಗಿತ ವನ್ನು ತಿಳಿದವೇ, ನಮ್ಮ ಚೇತನದಮೇಲೆ ಅದರ ಪರಿಣಾಮ ತಾನೇ ಆಗುತ್ತದೆ.

ತಿಳಿಯಲಾರೆವೇ, ಅದು ಆ ಪರಿಣಾಮವನ್ನು ಮಾಡಲಾರದು. ಮೂ
ಹೇಳಿದ ಬುದ್ಧಿ ಗೋರ್ಕಲ್ಲಮೇಲೆ ಸುರಿದ ಮಳೆ ಎಂದು ಸರ್ವಜ್ಞ ಹೇಳಿದ ಆ ಮ
ಒಂದು ಪರ್ಯಾಯ ಇದು. ಸಾಹಿತ್ಯ ನಮ್ಮ ಚೇತನದಲ್ಲಿ ಮಾಡಬಯ
ಮಾರ್ಪಾಡಿಗೆ ನಾವು ಅಣಿಯಾಗಿ ಇರಬೇಕು. ಹೀಗೆ ಅಣಿಯಾಗಿ ಸಮೀ
ಅದರಿಂದ ನಮ್ಮ ಜೀವನದಲ್ಲಿ ಆಗಬಹುದಾದ ಪರಿಣಾಮಕ್ಕೆ ತಡೆಯೂ
ಮಿತಿಯೂ ಇಲ್ಲ.

೩

ಈ ಉಪನ್ಯಾಸಗಳನ್ನು ನಡೆಸಲಪೇಕ್ಷಿಸಿರುವ ನಮ್ಮ ಮಿತ್ರರು ಉಪ
ವನ್ನು ಕುರಿತ ನಿಯಮಗಳಲ್ಲಿ ವಾದಗ್ರಸ್ತ ವಿಚಾರಗಳನ್ನು ತರಬಾರದು ಎಂದು
ನಿಯಮವನ್ನು ಹಾಕಿದ್ದಾರೆ. ಶ್ರೀ ರಾಜರತ್ನಂ ತುಂಬ ಸಜ್ಜನರು.
ತಮ್ಮ ಜೀವನದಲ್ಲಿ ಸೌಜನ್ಯದ ಉಪಾಸನೆಯನ್ನು ನಡೆಸಿದ್ದಾರೆ. ಎಲ್ಲ ರಿ
ಏಳಿಗೆಗೆ ಇದು ತಳಹದಿ ಎಂದು ಕಂಡಿದ್ದಾರೆ. ಆದ್ದರಿಂದ ಅವರು ಉಪನ್ಯಾ
ಈ ವಿಜ್ಞಾಪನೆ ಮಾಡುವುದು ತೀರ ಸಹಜ, ಉಚಿತ. ಆದರೆ ಒಂದು ಮಾ
ನಾವು ನೆನಪಿನಲ್ಲಿಡಬೇಕು. ನಾವು ನಾವಾಗಿ ಒಂದು ವಿಷಯದಲ್ಲಿ ವಾದ ಮ
ಇರಬಹುದು; ಆದರೆ ಅದು ಬೇರೆಯ ಮನಸ್ಸಿನ ಜನರಿಗೆ ವಾದದ ವಿಷಯ
ಕಾಣಬಹುದು. ಇಲ್ಲಿನ ನನ್ನ ಮಾತಿನಲ್ಲಿ ದೇವರು, ಧರ್ಮ, ಸತ್ಯ ಎಂದು
ಹಲವು ಸಂದರ್ಭದಲ್ಲಿ ಹೇಳುವವನಾಗಿದ್ದೇನೆ. ನಮ್ಮ ನೆರೆನಾಡಿನ ಸೋ
ಬಹುಮಂದಿಯ ಗೌರವಕ್ಕೆ ಪಾತ್ರರಾಗಿರುವ ಜನನಾಯಕ ಶ್ರೀ ಇ. ವಿ. ರಾಮ
ನಾಯಕರ್‌ಅವರು, ಇಂಥ ಮಾತೆಲ್ಲ ತಪ್ಪು ಎಂದು ನಂಬಿದ್ದಾರೆ, ಪ್ರ
ಮಾಡಿದ್ದಾರೆ, ಈಗಲೂ ಮಾಡುತ್ತಿದ್ದಾರೆ. ಇವರ ಅನುಯಾಯಿಗಳು ಇವರ
ಪ್ರತಿಮೆಯನ್ನು ತಿರುಚಿನಾಪಳ್ಳಿ ನಗರದ ದೊಡ್ಡ ಚೌಕವೊಂದರಲ್ಲಿ ಒಂದು ಸ್ತ
ಮೇಲೆ ಸ್ಥಾಪಿಸಿ ಈಚೆಗೆ ಅದರ ಅನಾವರಣವನ್ನು ನಡೆಸಿದರು. ಸ್ತಂಭದ
ಒಂದು ಕಲ್ಲು ಹಲಗೆಯಮೇಲೆ ಈ ಹಿರಿಯರವು ಎಂದು ಕೆಲವು ವಾಕ್ಯ
ಕೊರೆಯಿಸಿ ನಿಲ್ಲಿಸಿದ್ದಾರಂತೆ. ಹಾಗೆ ಕೊರೆಯಿಸಿರುವ ಕೆಲವು ವಾಕ್ಯ ಇವು :

> "ದೇವರನ್ನು ಕಲ್ಪಿಸಿದವನು ಮೂರ್ಖ;
> ದೇವರನ್ನು ಕುರಿತು ಪ್ರಚಾರ ಮಾಡುವವನು ಅಯೋಗ್ಯ;
> ದೇವರು ಎಂದು ನಂಬುವವನು ಕಾಡುಮೃಗ."

ಈ ಮಾತುಗಳನ್ನು ಸರಿಯೆಂದು ತಿಳಿದು ಇವನ್ನು ಕಲ್ಲಮೇಲೆ ಕೊರೆಯಿಸಿ
ಸ್ತಂಭದ ಒಂದು ಮುಖದಲ್ಲಿ ಪ್ರತಿಷ್ಠೆ ಮಾಡುವ ಜನಕ್ಕೆ ದೇವರನ್ನು

ನಾನು ಹೇಳುವ ಮಾತೆಲ್ಲ ವಾದಗ್ರಸ್ತ ಎಂದು ಕಾಣಬೇಕು. ಈ ಪ್ರತಿಮೆಯನ್ನು ಅನಾವರಣ ಮಾಡಿದ ಪ್ರಾಂತದ ಮುಖ್ಯ ಮಂತ್ರಿ ಶ್ರೀ ಕರುಣಾನಿಧಿ ಅವರಿಗೆ, ಈ ಮಾತನ್ನೊಪ್ಪದ ಹಿರಿಯರೊಬ್ಬರು ಒಂದು ಪತ್ರ ಬರೆದು, "ದೇವರನ್ನು ನಂಬಿದ ಜನರ ಮನಸ್ಸಿಗೆ ಇಂಥ ಮಾತಿನಿಂದ ನೋವಾಗುತ್ತದೆ, ಈ ಹಲಗೆಯನ್ನು ಇಲ್ಲಿಂದ ತೆಗೆಸಬೇಕು" ಎಂದು ಪ್ರಾರ್ಥಿಸಿದರು. ಕರುಣಾನಿಧಿಯವರು, "ದೇವರಿದ್ದಾನೆ ಎನ್ನುವವರಿಗೆ ನೋವಾಗುತ್ತದೆ ಎಂದು ಇಂಥ ಮಾತನ್ನು ಹೀಗೆ ಸ್ಥಾಪಿಸಬಾರದೆನ್ನುವುದು ಸರಿಯಲ್ಲ. ದೇವರಿದ್ದಾನೆ ಎನ್ನುವವರು ತಮಗೆ ಸರಿಯೆಂದು ಕಂಡ ರೀತಿಯಲ್ಲಿ ನಡೆದುಕೊಳ್ಳುತ್ತಾರೆ. ದೇವರಿಲ್ಲ ಎನ್ನುವವರಿಗೂ ಇದೇ ಅವಕಾಶ ಇರಬೇಕು. ಉತ್ತರ ದೇಶದಲ್ಲಿ ರಾಮಲೀಲಾ ಉತ್ಸವದ ದಿನ ರಾಮಭಕ್ತರು ರಾವಣ ಕುಂಭಕರ್ಣರ ಪ್ರತಿಮೂರ್ತಿಗಳನ್ನು ಸುಡುತ್ತಾರಂತೆ. ರಾವಣ ಒಬ್ಬ ಸಂಸ್ಕೃತಿವಂತ ತಮಿಳ ಎಂದು ನಂಬುವ ಜನ ಇದ್ದಾರೆ. ಅವರ ಮನಸ್ಸಿಗೆ ಇದು ಕೆಟ್ಟದೆನಿಸುವುದಿಲ್ಲವೇ ?" ಎಂದರಂತೆ. ರಾವಣ ತಮಿಳ ಎಂದು ಯಾರು ಹೇಳುತ್ತಾರೋ ಯಾವ ಆಧಾರದಮೇಲೆ ಹೇಳುತ್ತಾರೋ ನಮಗೆ ತಿಳಿಯದು. ಇದು ಹೇಗೆ ಆದರೂ ಉತ್ತರ ದೇಶದ ಜನ ರಾವಣನ ಪ್ರತಿಮೂರ್ತಿಯನ್ನು ಸುಡುವುದಕ್ಕೆ ಕಾರಣ, ಅವನು ಸೀತಾದೇವಿಯನ್ನು ಕದ್ದ ದುಷ್ಟ ಎನ್ನುವುದು. ತಮಿಳರು ಯಾರೂ ರಾವಣನ ಈ ನಡತೆ ಸರಿಯೆಂದು ಹೇಳಲಾರರು. ಕರುಣಾನಿಧಿಯವರ ಮಾತು ಎಳೆ ತಪ್ಪಿರುವುದು ಸ್ಪಷ್ಟವಾಗಿ ಕಾಣುತ್ತದೆ. ಉತ್ತರ ಭಾರತ ದ್ರಾವಿಡ ದೇಶಗಳ ಮಧ್ಯೆ ವಿರೋಧ ಕಲ್ಪಿಸುವ ಮನೋಧರ್ಮ ಇದಕ್ಕೆ ಕಾರಣ. ಇಂಥ ಮನೋಧರ್ಮ ವಾದವೇ ಇಲ್ಲದ ಕಡೆ ವಾದವನ್ನು ಹೂಡುತ್ತದೆ, ಸರಳವಾದ ಸಂಗತಿಗಳನ್ನು ವಾದಗ್ರಸ್ತಮಾಡುತ್ತದೆ. ಇಂದಿನ ನನ್ನ ಮಾತುಗಳಲ್ಲಿ ನಾನು ಯಾವ ಮಾತನ್ನೂ ಒಂದು ವಾದದ ದೃಷ್ಟಿಯಿಂದ ಆಡುವುದಿಲ್ಲ. ನನ್ನ ಮಾತು ಯಾವುದಾದರೂ ಕೇಳುವ ಯಾರಿಗಾದರೂ ಒಪ್ಪಿಗೆ ಆಗದೆ ಹೋದಲ್ಲಿ ಅಂಥ ಮಿತ್ರರು, ನಾನು ಆ ಮಾತನ್ನು ವಾದದ ದೃಷ್ಟಿಯಿಂದ ಆಡುತ್ತಿಲ್ಲ ಎಂದು ಗ್ರಹಿಸಿ ಸಮಾಧಾನವಾಗಿ ಇರಬೇಕು.

೪

ಕಾವ್ಯದಿಂದ ಆಗುವ ಕೆಲಸ ಎಂಬ ವಿಷಯವನ್ನು ವಿಚಾರ ಮಾಡುವಲ್ಲಿ ನಾವು, ಕಾವ್ಯ ಎಂದರೆ ಏನು ಎಂಬುದನ್ನು ಮೊದಲಾಗಿ ಮನಸ್ಸಿಗೆ ಸ್ಪಷ್ಟಪಡಿಸಿಕೊಳ್ಳಬೇಕು. ಕಾವ್ಯ ಎಂದರೆ ರಸಾತ್ಮಕ ವಾಕ್ಯ ಎಂದು ನಮ್ಮ ಸಂಸ್ಕೃತಿಯ ಹಿರಿಯರು ಹೇಳಿದ್ದಾರೆ. ಮನುಷ್ಯನ ಆದಿಮ ಸ್ಥಿತಿಯಲ್ಲಿ, ಭಾಷೆಯ ಆರಂಭ ಆದ ಕಾಲದಲ್ಲಿ, ಒಂದೊಂದು ಮಾತೂ ಕಾವ್ಯವೇ ಆಗಿದ್ದಿರಬೇಕು. ಲೋಕದ ವಸ್ತುಗಳನ್ನು ನೋಡಿ ಒಂದೊಂದರ ವಿಷಯದಲ್ಲೂ ಬೆರಗುಗೊಂಡು ಒಂದೊಂದಕ್ಕೂ

ಒಂದು ಹೆಸರನ್ನು ಕೊಡುವ ಆ ಹೊತ್ತಿನಲ್ಲಿ ಆ ಹೆಸರನ್ನು ಕೊಟ್ಟ ಮನುಷ್ಯನ ಜೀವ
ರಸವನ್ನನುಭವಿಸಿತು, ರಸವನ್ನು ನುಡಿಯಿತು. ಆ ಮಾತನ್ನು ಕೇಳಿ ಎದುರ ಜೀವ
ತಾನೂ ಆ ರಸವನ್ನು ಅನುಭವಿಸಿತು, ಆ ರಸವನ್ನು ಸೂಚಿಸಿದ ಹೆಸರು ಆ ಶಬ್ದ
ಎಂದು ಒಪ್ಪಿತು. ಹೀಗೆ ಬೆಳೆದು ಭಾಷೆ ತಕ್ಕಷ್ಟು ಪ್ರೌಢ ಆದ ಅವಸ್ಥೆಗೆ ಬಂದಾಗ
ಅದು ಮಾನವ ಹೃದಯದ ಅನೇಕ ಅನುಭವಗಳ ಹೊರ ರೂಪ ಆಯಿತು. ಒಬ್ಬನ
ರಸವನ್ನು ನುಡಿದು ಎದುರಾಳಿ ರಸವನ್ನು ಸವಿದು ಈ ಅನುಭವಗಳಿಗೆ ಕಾರಣವಾ
ವಾಕ್ಯಗಳು ಕಾವ್ಯ ಎಂಬ ಒಂದು ಮರ್ಯಾದೆಯ ಸ್ಥಾನವನ್ನು ಪಡೆದವು.

ಈ ಸ್ಥಾನವನ್ನು ಪಡೆದ ವಾಕ್ಯಗಳ ಲಕ್ಷಣಗಳೇನು ಎನ್ನುವುದನ್ನು ಇನ್ನಷ್ಟು
ವಿವರವಾಗಿ ಪರಿಶೀಲಿಸುವುದು ಅವಶ್ಯಕ. ಮನುಷ್ಯರಾದ ನಾವೆಲ್ಲ ಸತ್, ಚಿತ್,
ಆನಂದ ಎಂಬ ಮೂರು ತತ್ತ್ವಗಳ ಮಿಲನದಿಂದ ಆಗಿದ್ದೇವೆಂದು ನಮ್ಮ ಪೂರ್ವಿಕರು
ಹೇಳಿದ್ದಾರೆ. ನಾನು ಎಂದು ನಿಲ್ಲುವ ಒಬ್ಬ ಮನುಷ್ಯ ಹಾಗೆ ನಿಲ್ಲುವ ದೇಹ
ಮಾತ್ರ ಅಲ್ಲ. ದೇಹದಲ್ಲಿ ಇರುವ ಯಾವುದೋ ತತ್ತ್ವ ನಾನು ಎನ್ನುತ್ತದೆ. ಆ
ತತ್ತ್ವ ದೇಹದಿಂದ ಬೇರೆಯಾದ ಒಂದು ತತ್ತ್ವ. ಇದನ್ನು ಸಾಧಿಸುವುದಕ್ಕೆ ಬಹಳ
ಪ್ರಮಾಣ ಬೇಕಿಲ್ಲ. ನಾನು ಎನ್ನುತ್ತ ನಿಮ್ಮೆದುರಿಗೆ ಈಗ ನಿಂತಿರುವ ಈ ಮೂರ್ತಿ
ಒಂದು ದಿನ ಬರಿಯ ದೇಹ ಆಗಿ ಉಳಿಯುತ್ತದೆ. ಇದು ಈಗ ಎಷ್ಟು ದೇಹ ಆಗಲೂ
ಅಷ್ಟೇ ದೇಹ. ಆದರೆ ಆಗ ಇದರಲ್ಲಿ ನಾನು ಎನ್ನುವ ತತ್ತ್ವ ಇರುವುದಿಲ್ಲ, ಇದು ಆಗ
ನಾನು ಎನ್ನುವುದಿಲ್ಲ. ದೇಹದಲ್ಲಿರುತ್ತಾ ನಾನು ಎನ್ನುತ್ತಿರುವ ಈ ತತ್ತ್ವ, ಇದ
ಎನ್ನುವಲ್ಲಿ ಸತ್, ಚಿಂತಿಸಬಲ್ಲುದು ಎನ್ನುವಲ್ಲಿ ಚಿತ್, ಪಡಬಲ್ಲುದು ಎನ್ನುವಲ್ಲಿ
ಆನಂದ, ಈ ಮೂರೂ ಆಗಿದೆ. ಲೋಕತತ್ವದಿಂದ ಉದಿಸಿ ನಾನು ಎಂದು ಹೇಳ
ತ್ತಿರುವ ಈ ತತ್ತ್ವ ಲೋಕದಲ್ಲಿ ಬಾಳುತ್ತಾ ತಾನು, ತನ್ನ ಬುದ್ಧಿ, ತನ್ನ ಮನಸ್ಸು
ತನ್ನ ಉಸಿರು, ತನ್ನ ದೇಹ ಅದರ ಕರಣಗಳು, ಇವೆಲ್ಲ ಇರುವುದನ್ನು ಕಂಡುಕೊಳ್ಳು
ತ್ತದೆ. ಕರಣಗಳ ಮೂಲಕ ಲೋಕದ ವಿವರಗಳನ್ನು ಗ್ರಹಿಸುತ್ತದೆ. ಹೀಗೆ ಗ್ರಹಿ
ಸಿದ ವಿವರಗಳನ್ನು ಸಾಮಗ್ರಿಯಾಗಿ ಸೇರಿಸಿ ತನ್ನದೇ ಆದ ಒಂದು ಅನುಭವಗಳ
ಬೊಕ್ಕಸವನ್ನು ಮಾಡಿಕೊಳ್ಳುತ್ತದೆ. ಇವನ್ನು ಕುರಿತು ಯೋಚನೆ ಮಾಡುತ್ತದೆ.
ಅದರಲ್ಲಿರುವ ಅನುಭವವನ್ನು ಮೆಲುಕು ಹಾಕುತ್ತದೆ. ಇದರಲ್ಲಿ ಬುದ್ಧಿಯ ಭಾಗ
ಒಂದು ; ಪಾಡಿನ ಭಾಗ ಒಂದು. ಎರಡರಿಂದಲೂ ಚೇತನ ಸತ್ಯದತ್ತ ಹೆಜ್ಜೆ ಇಕ್ಕು
ತ್ತದೆ; ಭಾಗ್ಯವಶದಿಂದ ಸಿದ್ಧಿಯನ್ನು ಕಾಣುತ್ತದೆ. "ಪ್ರಣವ ಧನುಸ್ಸು, ಆತ್ಮ
ಶರ, ಬ್ರಹ್ಮ ಗುರಿ; ಎಚ್ಚರಿಕೆಯಿಂದ ಬಾಣ ಬಿಡಬೇಕು; ಆಗ ಅದು ಗುರಿಯಲ್ಲಿ
ಸೇರಿಕೊಳ್ಳುತ್ತದೆ," ಎಂದು ಉಪನಿಷತ್ತಿನಲ್ಲಿ ಹೇಳಿರುವ ಸಂಗತಿ ಇದೇ. ಪ್ರಣವ
ಎನ್ನುವುದು ಓಂ. ಓಂ ಎಂದರೆ ಅಹುದು; ಅಹುದು ಎಂದರೆ ವಸ್ತುಸ್ಥಿತಿ. ಎಂದರೆ
ನಮಗೆ ಯಾವುದು ಅರಿವಿಗೆ ಅನುಭವಕ್ಕೆ ಬರುತ್ತದೆ ಅದು. ನಮ್ಮ ಅರಿವಿಗೆ ಅನು

ಭವಕ್ಕೆ ಬಂದ ಸಾಮಗ್ರಿಯನ್ನು ಬಳಸಿ ಗುರಿಯಾದ ಬ್ರಹ್ಮದತ್ತ ಸಾರಿ ಅದನ್ನು ಸೇರುವುದು ನರರ ಕರ್ತವ್ಯ. ಈ ಕರ್ತವ್ಯದಲ್ಲಿ ತೊಡಗಿರುವ ಮನುಷ್ಯ ತನ್ನ ಕ್ರಮವನ್ನು ವಿವರಿಸುವಲ್ಲಿ ಮಾತನ್ನು ಬಳಸಿ ನಿರ್ಮಿಸುವ ರಚನೆ ರಸಪ್ರಮುಖ ಆದಾಗ ಕಾವ್ಯ ಆಗುತ್ತದೆ.

ರಸಯುಕ್ತವಾದ ವಾಕ್ಯ ಕಾವ್ಯ ಎಂದು ಹೇಳಿದ್ದಾಗಿದೆ. ಇಂಥ ವಾಕ್ಯವನ್ನು ಆಡುವವನು ಕವಿ. ನಮ್ಮ ಪೂರ್ವಿಕರು, ಕಾವ್ಯ ಕವಿ ಆಡಿದ ಮಾತು, ಕವಿ ಮಾಡಿದ ಕಾರ್ಯ, ಎಂದಿದ್ದಾರೆ. ಮನುಷ್ಯರೆಲ್ಲ ಇಷ್ಟೋ ಅಷ್ಟೋ ಪ್ರಮಾಣದಲ್ಲಿ ಕವಿಗಳೇ. ಎಲ್ಲರೂ ರಸವನ್ನು ಅನುಭವಿಸುತ್ತಿರುವವರೇ. ಅದಕ್ಕೆ ಅಲ್ಪ ಸ್ವಲ್ಪವಾದರೂ ರೂಪು ಕೊಟ್ಟು ನಾವೆಲ್ಲ ಕೆಲವಾದರೂ ಮಾತನಾಡುತ್ತೇವೆ. ಎಲ್ಲ ದಿನದ ತೀರ ವಾಡಿಕೆಯ ಅನುಭವಕ್ಕೆ ಯಾರೂ ಕೊಡಬಹುದಾದ ರೂಪಿನ ಮಾತು ತೀರ ವಾಡಿಕೆ ಎಂಬ ಕಾರಣದಿಂದ ಕಾವ್ಯ ಎಂದು ಕಾಣುವುದಿಲ್ಲ. ಕಾವ್ಯ ಎನ್ನಿಸುವ ವಾಕ್ಯಪುಂಜ ವಾಡಿಕೆಯ ರೀತಿಯ ಮಾತಿನಿಂದ ಇಷ್ಟೋ ಅಷ್ಟೋ ಬೇರೆಯಾಗಿರುತ್ತದೆ. ಈ ವ್ಯತ್ಯಾಸಕ್ಕೆ ಕಾರಣ ಕವಿಯಾದವನು, ಸಾಮಾನ್ಯ ಜನದಿಂದ ಸ್ವಲ್ಪ ಬೇರೆಯಾಗಿರುವುದು. ಅವನು ಈ ಕಾರಣದಿಂದ ಹೆಚ್ಚು ತೀವ್ರವಾದ ಅನುಭವವನ್ನು ಪಡೆಯುವನು. ಇದಕ್ಕೆ ತನ್ನದೇ ಆದ ಶಬ್ದಗಳಿಂದ ರೂಪು ಕೊಡುವನು. ಈ ಕಾರಣದಿಂದ ಅವನ ನಿರ್ಮಾಣದ ವಾಕ್ಯವನ್ನು ಕೇಳುವುದರಲ್ಲಿ ಒಂದು ಸೊಗಸು ಕಾಣುವುದು. ಅದೇ ಹೊತ್ತಿನಲ್ಲಿ ಕವಿಯ ಅನುಭವ ಕೇಳುವವರ ಹೃದಯದಲ್ಲಿ ಪ್ರತಿಬಿಂಬಿಸುವುದು.

ಎಂದರೆ ಕಾವ್ಯದ ವಸ್ತು ರಸದ ಸಾಧಾರಣ ರೀತಿಯದೆನ್ನಬಹುದಾದ ಅನುಭವ; ಅದನ್ನೊಳಗೊಂಡ ಶಬ್ದ ಅಸಾಧಾರಣ ರೀತಿಯ ಶಬ್ದ.

ಇದನ್ನು ನಮ್ಮ ಪೂರ್ವಿಕರು, ಕಾವ್ಯದ ಆತ್ಮ ರೀತಿ ಎಂಬ ಸೂತ್ರದಲ್ಲಿ ಅಡಗಿಸಿ ಹೇಳಿದರು.

ಹಿರಿಯರಾದ ಶ್ರೀ ಗುಂಡಪ್ಪನವರು ಈ ವಿಷಯವನ್ನೂ ಇದಕ್ಕೆ ಸಂಬಂಧಿಸಿದ ಹಲವು ವಿಷಯವನ್ನೂ ಸಾಹಿತ್ಯವನ್ನು ಕುರಿತ ತಮ್ಮ ಒಂದು ಉಪನ್ಯಾಸದಲ್ಲಿ ಹೇಳಿದ್ದಾರೆ. ಅದು 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಎಂಬ ಅವರ ವಿಮರ್ಶನ ಗ್ರಂಥದಲ್ಲಿ ಸೇರಿದೆ. ತಮ್ಮಲ್ಲಿ ಅನೇಕರು ಅದನ್ನು ಓದಿರಬೇಕು. ಇದುವರೆಗೂ ಓದಿಲ್ಲದ ಮಿತ್ರರು ಅದನ್ನು ಓದಬೇಕು ಎಂದು ನನ್ನ ಸೂಚನೆ. ಸಾಹಿತ್ಯವನ್ನು ಕುರಿತ ಅನೇಕ ವಿವರಗಳನ್ನು ಕುಳಿತು ಯೋಚಿಸಲು ಆ ಗ್ರಂಥ ನೆರವಾಗುತ್ತದೆ. ಈ ರೀತಿಯ ಮಾತಿಗೆ ಉದಾಹರಣೆಯಾಗಿ ಆ ಉಪನ್ಯಾಸದಲ್ಲಿ ಒಂದು ವಾಕ್ಯವನ್ನು ಕೊಟ್ಟಿದೆ. ಎದುರಲ್ಲಿ ಒಂದು ಒಣಗಿದ ಮರ ಇದೆ ಎನ್ನುವುದಕ್ಕೆ "ಶುಷ್ಕೋ ವೃಕ್ಷಃ ತಿಷ್ಠತ್ಯಗ್ರೇ" ಎಂದು ಒಬ್ಬ ಹೇಳುತ್ತಾನೆ; ಇನ್ನೊಬ್ಬ "ನೀರಸ ತರುರಿಹ ಪುರತೋ ಭಾತಿ" ಎನ್ನುತ್ತಾನೆ. ಮೊದಲನೆಯ ಪದಪುಂಜ ಕಿವಿಗೆ

ಸುಖವಾಗಿಲ್ಲ; ಎರಡನೆಯದು ಸುಖವಾಗಿದೆ. ಈ ರೀತಿಯ ಮಾತು ಕಾವ್ಯ ಎನಿಸಿ ಕೊಂಡಿದೆ. ಇದು ಹಿಂದಿನ ಲಾಕ್ಷಣಿಕರ ಸೂಚನೆ. ಇದು ಸರಿಯೇ. ಕಾವ್ಯ ಸುಂದರ ಶಬ್ದಗಳ ಪುಂಜವಾಗಿರಬೇಕು. ಆದರೆ ಜೊತೆಗೆ ಇನ್ನೊಂದು ವಿವರವೂ ನಮ್ಮ ಗಮನದಲ್ಲಿರಬೇಕು. ಪದಪುಂಜ ಅದನ್ನು ಬಳಸುವವನ ಅನುಭವವನ್ನು ಯಥಾವತ್ತಾಗಿ ರೂಪಿಸಬೇಕು: ಸೊಗಸಾಗಿರುವುದು ಎಷ್ಟು ಅವಶ್ಯಕವೋ ಯಥಾ ವತ್ತಾಗಿರುವುದು ಅಷ್ಟೇ ಅವಶ್ಯಕ. ಮರವನ್ನು ಕಂಡಾಗ ಅದನ್ನು ಕಂಡವನಿಗೆ ಅದು ನೀರಸ ತರು ಎಂದು ಕಂಡಿತೇ? ಶುಷ್ಕ ವೃಕ್ಷ ಎಂದು ಕಂಡಿತೇ? ಅದು ತಿಷ್ಠತಿ ಎಂಬಂತಿತ್ತೇ? ಭಾತಿ ಎಂಬಂತಿತ್ತೇ? ಕಾವ್ಯ ಸುಂದರವಾಗಿ ಇರಬೇಕು; ಹಾಗೆಯೇ ಸತ್ಯವಾಗಿಯೂ ಇರಬೇಕು.

ರಸದಿಂದ ಉದಿಸಿ, ರಸವನ್ನು ಮೂಡಿಸಬಲ್ಲ, ಸತ್ಯ, ಸುಂದರ, ಆದ ವಾಕ್ಯ ಕಾವ್ಯ ಎಂದಾಯಿತು. ಸತ್ಯ, ಸೌಂದರ್ಯ, ಒಂದೇ ತತ್ತ್ವ ಎಂದು ಒಂದು ಮತ ಇದೆ. ಆಂಗ್ಲ ಕವಿ ಕೀಟ್ಸ್ ಇದನ್ನು "ಬ್ಯೂಟಿ ಈಸ್ ಟ್ರೂತ್, ಟ್ರೂತ್ ಬ್ಯೂಟಿ" ಎಂಬ ಸೂತ್ರವಾಕ್ಯದಲ್ಲಿ ಉಲ್ಲೇಖಿಸಿದನು. ಅವನ ಅರ್ಥದಲ್ಲಿ ಇದು ಸರಿಯಾದ ಮಾತು. ಆ ಅರ್ಥವನ್ನು ಹಿಡಿಯದ ಜನ, "ಸತ್ಯವೆಲ್ಲ ಸುಂದರ ಹೇಗೆ ಆಗುತ್ತದೆ? ಎರಡೆರಡಲು ನಾಲ್ಕು ಎನ್ನುವುದು ಸತ್ಯ ಅದರಲ್ಲಿ ಸೌಂದರ್ಯ ಏನಿದೆ?" ಎಂದು ಕೇಳುತ್ತಾರೆ. ಇದರಂತೆ ಇನ್ನು ಹತ್ತು ಪ್ರಶ್ನೆ ಹಾಕುತ್ತಾರೆ. ಈ ಪ್ರಶ್ನೆಗಳನ್ನೆಲ್ಲಾ ಪರಿಶೀಲಿಸುವುದು ಇಲ್ಲಿ ಅನವಶ್ಯಕ. ಆದರೆ ಇಂಥವರಿಗೂ ಸಮಾಧಾನವಾಗಿ ಒಂದು ಮಾತನ್ನು ಹೇಳಬಹುದು. ಎರಡೆರಡಲು ನಾಲ್ಕು ಎನ್ನುವ ಮಾತಿನಲ್ಲಿ ಮೂಲತಃ ಸೌಂದರ್ಯ ಇಲ್ಲ. ಆದರೆ ಅದು ಹೇಳುವ ಸತ್ಯ ಎಷ್ಟು ಅನುಲ್ಲಂಘ್ಯ ಎಂದು ಯೋಚನೆಮಾಡಿದೆವೇ ಈ ಸಣ್ಣ ಸಂಗತಿ ಸೃಷ್ಟಿಯ ಅತ್ಯದ್ಭುತ ನಿಯಮ ಗಳಲ್ಲಿ ಒಂದೆನ್ನುವುದು ಮನಸ್ಸಿನಲ್ಲಿ ಊರಿ ಆಶ್ಚರ್ಯ ತಲೆದೋರುತ್ತದೆ; ಎಂದರೆ ಈ ವಾಕ್ಯವನ್ನು ಕುರಿತ ಈ ಭಾವನೆಯಿಂದ ರಸ ಮೂಡುತ್ತದೆ. ಎಂದರೆ ಈ ಸತ್ಯದಲ್ಲಿ ಸೌಂದರ್ಯ ಇದೆ. ಅದನ್ನು ಕಾಣುವುದರಿಂದ ನಮ್ಮ ಮನಸ್ಸಿನಲ್ಲಿ ಸೃಷ್ಟಿ ಅದ್ಭುತ ಎಂಬ ಭಾವ ಮೂಡುತ್ತದೆ. ಆದ್ದರಿಂದ ಸತ್ಯ, ಸೌಂದರ್ಯ, ಒಂದೇ ಎಂದು ಹೇಳಬಹುದು ಎಂದು ನಮಗೆ ತೋರುತ್ತದೆ.

ಹೀಗಿದ್ದೂ ಸತ್ಯ ತಾನು ಸುಂದರ ಎನ್ನಿಸಬೇಕಾದರೆ ಭಾವದ ಮೂಲಕ ಹಾಯಬೇಕು. ಹಾಗೆ ಹಾಯ್ದು ಮಾತಿನಿಂದ ರೂಪುಗೊಂಡಾಗ ಅದು ಕಾವ್ಯ ಎನಿಸಿಕೊಳ್ಳುತ್ತದೆ.

ಕಾವ್ಯ ಎಂದರೆ ಪದ್ಯ ಎಂದು ವಾಡಿಕೆಯ ತಿಳಿವಳಿಕೆ. ಎಂದರೆ ಸೌಂದರ್ಯ ವನ್ನು ರೂಪಿಸುವ ಪದಪುಂಜದಲ್ಲಿ ಛಂದಸ್ಸು ಇರುತ್ತದೆ ಎಂದು ಕಲ್ಪನೆ. ದಿಟವಲ್ಲಿ ನಮ್ಮ ಪೂರ್ವಿಕರು ಈ ಭಾವನೆಯನ್ನು ಇಟ್ಟುಕೊಂಡಿರಲಿಲ್ಲ ಎನ್ನಬೇಕು. ಸಂಸ್ಕೃತ

ಸಾಹಿತ್ಯದಲ್ಲಿ, ದೇಶಭಾಷೆಗಳ ಸಾಹಿತ್ಯದಲ್ಲಿ, ಕಾವ್ಯ ಎಂದು ಹೆಸರಾಗಿರುವ ಅನೇಕ ಗ್ರಂಥಗಳು ಗದ್ಯದಲ್ಲೂ ಇವೆ. ಕಾವ್ಯ ಅದು ಹೇಳುವ ವಸ್ತುವಿನ ಗುಣದಿಂದ ಕಾವ್ಯ ಆಗುತ್ತದೆ. ಅದರ ಭಾಷೆ ರಚನೆ ಮಾತ್ರದಿಂದ ಅಲ್ಲ.

ಈ ವಿಷಯ ಆಂಗ್ಲ ಸಾಹಿತ್ಯದಲ್ಲಿ ವಿಸ್ತಾರವಾಗಿ ಚರ್ಚೆಗೆ ಬಂದಿದೆ. ಡಾಕ್ಟರ್ ಜಾನ್ಸನ್ ಎಂಬ ವಿಖ್ಯಾತ ಸಾಹಿತಿ

I put my hat upon my head
And walked into the Strand ;
And there I met another man
Whose hat was in his hand,

ಎಂಬ ನಾಲ್ಕು ಸಾಲನ್ನು ಛಂದಸ್ಸಿದ್ದರೂ ಕಾವ್ಯ ಅಲ್ಲದ ರಚನೆಗೆ ಉದಾಹರಣೆಯಾಗಿ ಕೊಟ್ಟರಂತೆ. ಆಮೇಲೆ ಬಂದ ಒಬ್ಬ ಹಿರಿಯ ಲೇಖಕರು, "ಈ ಪಂಕ್ತಿಗಳು ಪದ್ಯ ಅಲ್ಲ ಎನ್ನುವುದಿರಲಿ, ಅವು ಗಮನಾರ್ಹವಾದ ಯಾವುದೇ ಸಂಗತಿಯನ್ನು ಹೇಳುವುದಿಲ್ಲ. ಏನೂ ಅಲ್ಲದ ಮಾತು ಕವಿತೆ ಅಲ್ಲ ಎಂದು ಸ್ಥಾಪಿಸಬೇಕಾದ್ದೇನು ?" ಎಂದರು. ಕಾವ್ಯಾಕಾವ್ಯಗಳ ಚರ್ಚೆ ಬಂದಾಗ ಒನ್ಮೆ ನಾನು ಈ ಪಂಕ್ತಿಗಳಿಗೆ ಸಮನಾಗಿ

ಶಾಸನದಿಲಾಖೆಯೊಳ್ ಕ|ಮ್ಮಿಷನರಾಜ್ಞೆಯಲಿ
ತೊಡಗಿದನ್ ಪ್ರಾಕ್ಕಾವ್ಯಾ|ನ್ವೇಷಣ ಕಾರ್ಯದೊಳಾ ರಾ-|
ಮಾಶಾಸ್ತ್ರಿ ತನೂಜನುಗ್ರನರಸಿಂಹಾರ್ಯಂ || ಪೆರ್ಷ
ಹೊಂದಿದನೇ ಸ್ಪೀ|ರ್ವರ್ಸ ಪ್ರಭು ಎಂದು ಲೋಕ
ಮರುಗುತಲಿರೆ ರಾ|| ಬ್ರಿರ್ಸ ದೊರೆಯೈತಂದೀ| ಮರ್ಸ-
ಸಬದಾರ್ ಜನ ಚಕೋರಮಂ ತಣಿಯಿಸಿದಂ ||

ಎಂದು ಎರಡು ಪದ್ಯವನ್ನು ಕಟ್ಟಿ ಹೇಳಿದೆನು. ಈ ಕಂದ ಪದ್ಯಗಳು ಛಂದಸ್ಸಿನ ಎಲ್ಲ ನಿಯಮಗಳನ್ನೂ ಪಾಲಿಸಿವೆ. ಜೊತೆಗೆ ಇಲ್ಲಿ ಚಂದ್ರ ಚಕೋರ ವಿಷಯದ ಕವಿಸಮಯದ ಬಳಕೆಯೂ ಕಾಣುತ್ತದೆ. ಆದರೂ ಇವು ಕಾವ್ಯ ಆಗುವುದಿಲ್ಲ. ಕಾರಣ, ಇವುಗಳಲ್ಲಿ ರಸವಿಲ್ಲ.

ಇಂಥ ವ್ಯರ್ಥ ವ್ಯಾಪಾರ ಅಲ್ಲ, ರಸಯುಕ್ತ ಅಲ್ಲದ ಎಷ್ಟೇ ಯುಕ್ತವಾದ ಸಂಗತಿಗಳನ್ನು ಪದ್ಯವಾಗಿ ರಚಿಸಿದರೂ ಆ ಪದ್ಯಗಳು ಕಾವ್ಯ ಆಗುವುದಿಲ್ಲ. ನಮ್ಮ ಹಿರಿಯರು ನಿಘಂಟುಗಳನ್ನೆಲ್ಲ ಪದ್ಯವಾಗಿಯೇ ಬರೆದಿಟ್ಟರು. ಹಾಗೆ ಬರೆದ ಉದ್ದೇಶ ಬಾಯಿಪಾಠ ಮಾಡಲು ಸುಲಭವಾಗಲಿ ಎನ್ನುವುದು. ಅವರೇ ಅಂಥ ಕೃತಿಯನ್ನು

ಕಾವ್ಯ ಎಂದು ಕರೆಯಲಿಲ್ಲ. ಹೀಗೆಯೇ ಅರ್ಥಶಾಸ್ತ್ರ, ವೈದ್ಯಶಾಸ್ತ್ರ, ಇಂಥ ಶಾಸ್ತ್ರ ವಿಚಾರಗಳನ್ನು ಹಿಡಿದು ಅನೇಕ ಪಂಡಿತರು ಅನೇಕ ಕೃತಿಗಳನ್ನು ರಚಿಸಿದ್ದುಂಟು. ಕನ್ನಡದ ಕವಿಚರಿತೆಯಲ್ಲಿ ಇಂಥ ಹೆಸರು ಅನೇಕ ದೊರೆಯುತ್ತದೆ. ಈ ಕೃತಿಗಳು ಯಾವುದೂ ಕಾವ್ಯ ಅಲ್ಲ.

ಪದ್ಯ ಆಗಿರಲಿ, ಪದ್ಯ ಅಲ್ಲದಿರಲಿ, ಕಾವ್ಯ ಆಗಿರುವ ವಾಕ್ಯ ಅದರ ನಿರ್ಮಾಪಕ ಸ್ವಂತವಾಗಿ ಅನುಭವಿಸಿದ ವಿಷಯವನ್ನು ನಮಗೆ ರುಚಿಸುವಂತೆ ಹೇಳುತ್ತದೆ. ಕಂಡವನು ಒಬ್ಬ ಉಂಡವರು ಸಾವಿರ ಜನ. ಸಂಸ್ಕೃತ ಕಾವ್ಯದ ಆದಿಯೆಂದು ಹೆಸರಾಗಿರುವ ರಾಮಾಯಣದ ಮಂಗಳ ಶ್ಲೋಕವಾಗಿರುವ "ಮಾ ನಿಷಾದ" ಎಂದು ಮೊದಲಾಗುವ ಶ್ಲೋಕ, ಜೊತೆಯಾಗಿದ್ದ ಗಂಡು ಹೆಣ್ಣು ಎರಡು ಕ್ರೌಂಚದಲ್ಲಿ ಗಂಡನ್ನು ಒಬ್ಬ ವ್ಯಾಧ ಕೊಂದಾಗ ಕವಿ ವಾಲ್ಮೀಕಿ ದುಃಖದಿಂದ ಉದ್ಗರಿಸಿದ ವಾಕ್ಯ ಎಂದು ಐತಿಹ್ಯ ಇದೆ. ವಿಷಯ ದುಃಖ. ಅದು ಋಷಿಯ ಬಾಯಿಂದ ಒಂದು ಶಾಪದ ಮಾತನ್ನಾಡಿಸಿತು. ಅದನ್ನಾಡಿದ ಒಡನೆ ಅವನು "ಅಯ್ಯೋ! ನನ್ನ ಬಾಯಿಂದ ಇಂಥ ಮಾತು ಬಂದಿತೇ" ಎಂದು ಪರಿತಾಪಪಟ್ಟನು. "ಶೋಕಾರ್ಥವಾಗಿ ನಾನು ನುಡಿದ ಮಾತು ಶ್ಲೋಕವಾಗಲಿ" ಎಂದು ಪ್ರಾರ್ಥಿಸಿದನು. ಮಾತು ಶಾಪದ ಬರಿಯ ಶ್ಲೋಕ ಅಲ್ಲ, ಮಂಗಳ ಶ್ಲೋಕವೇ ಆಯಿತು. ಅದನ್ನು ಮೊದಲಿಟ್ಟುಕೊಂಡು ಕವಿ ರಾಮಾಯಣ ಕಾವ್ಯವನ್ನು ನಿರ್ಮಿಸಿದನು. ಬಹು ಕಾವ್ಯದ ಮೂಲ ಇಂಥ ತೀವ್ರಯಾತನೆ. ಪರ್ಷಿಯಾ ದೇಶದ ಹಾಫಿಜ್ ಕವಿ ತನ್ನನ್ನು ಕುರಿತು ಹೇಳಿಕೊಂಡ ಒಂದು ವಾಕ್ಯದ ಇಂಗ್ಲಿಷ್ ಭಾಷಾಂತರ:

> For each small word thy heart has surely bled
> silent and long.........

ಎಂದರೆ, ಎಲ್ಲ ಕವಿಯೂ ಬರಿಯ ಯಾತನೆಯನ್ನೇ ಚಿತ್ರಿಸುತ್ತಾನೆ ಎಂದಲ್ಲ. ಕವಿಯಲ್ಲಿ ಕಾವ್ಯದ ಭಾವ ಹೇಗೆ ಮೂಡುತ್ತದೆ ಎನ್ನುವುದು ಈ ವಾಕ್ಯದಲ್ಲಿ ಉಕ್ತವಾಗಿದೆ. ಈ ಸಂಗತಿಯನ್ನು ಆಂಗ್ಲ ಕವಿ ಷೆಲ್ಲೀ ಕೆಲವು ಪಂಕ್ತಿಗಳಲ್ಲಿ ಹೇಳಿದ್ದಾನೆ. ಕವಿ ಮುಂಜಾನೆಯಿಂದ ಸಂಜೆಯವರೆಗೆ ಒಂದು ಕಡೆ ಕೆಡೆದಿರುತ್ತಾನೆ. ಸರೋವರದ ನೀರಿನಿಂದ ಪ್ರತಿಫಲಿಸಿದ ಸೂರ್ಯರಶ್ಮಿ ಐವೀ ಬಳ್ಳಿಯ ಅರಳಿದ ಮೊಗ್ಗಿನ ಒಳಗೆ ಕುಳಿತಿರುವ ಸ್ವರ್ಣ ವರ್ಣದ ತುಂಬಿಗಳನ್ನು ಬೆಳಗುವುದನ್ನು ನಿಟ್ಟಿಸಿ ನೋಡುತ್ತಿರುತ್ತಾನೆ. ನಿಟ್ಟಿಸಿ ನೋಡಿಯೂ ಅವು ಏನು, ಏತರವು ಎಂದು ಅವನು ಗಮನಿಸುವುದಿಲ್ಲ. ಹೀಗಿದ್ದೂ ಈ ಅನುಭವದಿಂದ ಅವನು ಜೀವಂತ ಮಾನವನಿಗಿಂತ ಹೆಚ್ಚು ಸತ್ಯ ಆದ ಆಕೃತಿಗಳನ್ನು ಸೃಷ್ಟಿಸುತ್ತಾನೆ. ಅವು ಅಮರತೆಯ ಹುಟ್ಟುಮರಿಗಳಾಗುತ್ತವೆ. ಹತ್ತಿರ ಹತ್ತಿರ ಇದೇ ಅರ್ಥ ಷೇಕ್ಸ್‌ಪಿಯರ್ ಕವಿಯ ಒಂದು ವಾಕ್ಯದಲ್ಲಿ

ಕಾಣುತ್ತದೆ. ಕವಿಯ ಪ್ರತಿಭೆ ಅಪರಿಚಿತ ವಸ್ತುಗಳನ್ನು ರೂಪಿಸುತ್ತಾ ಅವನ ಲೇಖನಿ

gives to airy nothing
A local habitation and a name,

ಗಾಳಿಯಂತೆ ಶೂನ್ಯವಾದ ತತ್ವಕ್ಕೆ ಒಂದು ಆವಾಸವನ್ನು ನಿರ್ಮಿಸಿ ಒಂದು ಹೆಸರನ್ನು ಕೊಡುತ್ತದೆ. ಇದನ್ನು ಮಾಡಲು ಅವನಿಗೆ ಶಕ್ತಿ ಬರುವುದು ಅವನನ್ನು ಪೋಷಿಸಿದ ಸ್ವರ್ಗಜನ್ಯ ಸತ್ವ ಒಂದರಿಂದ. ಕೋಲೆರಿಜ್ ಹೇಳಿದಂತೆ, ಕವಿಯಾದವನು

On honey dew has fed and drunk the milk of paradise.

ಈ ಪೋಷಣೆಯ ಪ್ರಭಾವದಲ್ಲಿ ಕವಿ ತನಗೆ ಬಂದಿರುವ ಶಕ್ತಿಯನ್ನು ಕುರಿತು ತಾನೇ ವಿಸ್ಮಯಗೊಳ್ಳುತ್ತಾನೆ. ತೀರ ಈಚಿನ ಐರ್‌ಲೆಂಡ್ ಕವಿಯೊಬ್ಬನು ಹೇಳಿರುವಂತೆ:

We are the music makers ;
We are the dreamers of dreams
World losers and world forsakers
On whom the pale moon gleams ;
We are the movers and shakers
Of the world for ever it seems.

ಕಾವ್ಯದ ಈ ನಿರ್ಮಾಣ ಶಕ್ತಿಯನ್ನು ನೇಮಿಚಂದ್ರ "ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ ...." ಎಂದು ಮೊದಲಾಗುವ ತನ್ನ ಪದ್ಯದಲ್ಲಿ ಬಹು ಚೆನ್ನಾಗಿ ವರ್ಣಿಸಿದನು. ಹೊರಗೆ ಆಗಿರಲಿ ಆಗದೆ ಹೋಗಿರಲಿ ಅಸಾಧ್ಯ ಸಂಗತಿಗಳೆಲ್ಲ ಕವಿಗಳ ಕೃತಿಯಲ್ಲಿ ಆದವು ; ಅವು ಆದಂತೆ ಹೇಳಿ ಕವಿಗಳು ತಮ್ಮ ಗುರಿಯನ್ನು ಸಾಧಿಸಿದರು. ಮತ್ತೊಬ್ಬ ಕನ್ನಡ ಕವಿ ಹೇಳಿದಂತೆ ಕವಿ ನೂತನ ಬ್ರಹ್ಮ.

೫

ಅನುಭವ, ಉಕ್ತಿ, ಎರಡರಿಂದಲೂ ಸಂಪನ್ನವಾದ ಕವಿಪರಂಪರೆ ಭರತವರ್ಷದ ಬಹುಮುಖದ ಸೌಭಾಗ್ಯದ ಒಂದು ಮುಖ. ನಮ್ಮ ಕಾವ್ಯ ವೇದದಲ್ಲಿ ಆರಂಭವಾಯಿತು. ಉಷಸ್ಸನ್ನು ವರ್ಣಿಸಿದ ವೇದಕಾಲದ ಋಷಿ ನಮ್ಮ ಕವಿ ಪರಂಪರೆಯ ಆದಿಪುರುಷ. ಅವನ ಕಣ್ಣು ಸೃಷ್ಟಿಯ ಸೌಂದರ್ಯವನ್ನು ನೋಡಿ ಆನಂದದಿಂದ ಅರಳಿತು. ಅವನ ಹೃದಯ ಭಾವದಿಂದ ತುಂಬಿತು. ಅವನ ಬಾಯಿ ಭಾವದ ಭರವನ್ನು ಮಾತುಮಾಡಿ ನುಡಿಯಿತು. ಸಂಹಿತೆಯ ಕಾಲ ಮುಗಿದು ಉಪನಿಷತ್ತಿನ ಕಾಲ ಬಂದಾಗ್ಗೆ ಇಂಥದೇ ಮನಸ್ಸು ಸೃಷ್ಟಿಯ ರಹಸ್ಯವನ್ನು ಇಷ್ಟೇ ತೀವ್ರವಾಗಿ ಗ್ರಹಿಸಿತು, ಇಷ್ಟೇ ಸುಂದರವಾಗಿ ನುಡಿಯಿತು. "ಭೀಷಾ ಅಸ್ಮಾತ್ ವಾತಃ

ಪವತೇ," "ತಮೇವ ಭಾಂತಂ ಅನುಭಾತಿ ಸರ್ವಂ," "ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ ಕ್ಷೀಯಂತೇ ಸರ್ವಕರ್ಮಾಣಿ ಯಸ್ಮಿನ್ ದೃಷ್ಟೇ ಪರಾವರೇ," "ತಸ್ಯಮಧ್ಯೇ ವಹ್ನಿ ಶಿಖಾ ಅಣೀಯೋರ್ಧ್ವಾ ವ್ಯವಸ್ಥಿತಃ ನೀಲತೋಯದ ಮಧ್ಯಸ್ಥಾ ವಿದ್ಯುಲ್ಲೇಖೇವ ಭಾಸ್ವರಾ" ಈ ಉಪನಿಷದ್ವಾಕ್ಯಗಳು ಋಷಿಯ ಹೃದಯ ಕಂಡುಕೊಂಡ ಒಂದು ನಿಗೂಢ ಸತ್ಯ ಸುಂದರತತ್ವವನ್ನು ಸುಂದರ ಶಬ್ದಗಳಲ್ಲಿ ಪ್ರಕಟಿಸಿದವು. ಆಮೇಲಿನ ಕಾಲದಲ್ಲಿ ಬಂದ ರಾಮಾಯಣ ಭಾರತ ಜನಾಂಗದ ಸಂಸ್ಕೃತಿ ಮುಟ್ಟಿದ್ದ ಮಟ್ಟವನ್ನು ಚಿತ್ರಿಸಿದವು, ಆ ಸಂಸ್ಕೃತಿಗೆ ಒಂದು ಮೇಲ್ಪಂಕ್ತಿಯನ್ನು ಹಾಕಿಕೊಟ್ಟವು. ಧರ್ಮವನ್ನು ಕುರಿತ ವಿಚಾರ ಬೆಳೆದಂತೆ ಜನಾಂಗದ ಕಾವ್ಯ ಪುರಾಣಗಳ ರೂಪವನ್ನು ಪಡೆಯಿತು. ಆಧ್ಯಾತ್ಮಿಕ ತತ್ತ್ವಗಳು ಮನಸ್ಸಿಗೆ ಸ್ಪಷ್ಟವಾಗಲಿ ಎಂಬ ಅಪೇಕ್ಷೆಯಿಂದ ನಮ್ಮ ಹಿರಿಯರು ವಾಮನ ನರಸಿಂಹ ಮುಂತಾದ ಅವತಾರಗಳ ಕಥೆಗಳನ್ನು ರಚಿಸಿದರು. ಮಾನವನ ಇತಿಹಾಸ ವಿಶ್ವನಿಯಾಮಕ ಶಕ್ತಿಯ ವಿಕಾಸ ಮಾತ್ರ ಎಂದು ಮನಗಂಡ ಮಹನೀಯ ಚೇತನಗಳು ಆಮೇಲಿನ ಧರ್ಮ ವಿಷಯದ ಕಾವ್ಯರಾಶಿಯನ್ನು ಸೃಷ್ಟಿಮಾಡಿದವು. ಮಹಾಭಾರತವ ಕೃಷ್ಣ ದೈವದ ಒಂದು ಅವತಾರ ಎಂಬ ಭಾವವನ್ನು ಸಿದ್ಧಾಂತ ಮಾಡುವುದಕ್ಕೆ ಭಾಗವತದಂಥ ಕಥೆ ಒಂದು ರೂಪುಗೊಂಡಿತು. ದೈವವನ್ನು ಕುರಿತ ಬೇರೆ ಬೇರೆ ಭಾವಗಳು, ಬೇರೆ ಬೇರೆ ದೇವರುಗಳೇ ಆದ ಕಾಲಕ್ಕೆ, ಒಬ್ಬೊಬ್ಬ ಇಂಥ ದೇವರನ್ನು ಕುರಿತು ಭಕ್ತರು ಕಥೆಗಳನ್ನು ಕಟ್ಟಿದರು. ಅವನ್ನು ಕಾವ್ಯವಾಗಿ ರಚಿಸಿದರು. ಈ ಸ್ಥಿತಿಯಲ್ಲಿ ಧರ್ಮವನ್ನೋ ದೈವವನ್ನೋ ಕುರಿಯದೆಯೆ ಸೌಂದರ್ಯಪ್ರೇಮ ಕಾವ್ಯದ ರೂಪವನ್ನು ತಾಳುವುದು ಸಹಜ. ಕಾಳಿದಾಸ, ಭವಭೂತಿ, ದಂಡಿ ಮುಂತಾದ ಮಹನೀಯ ಚೇತನದ ಕವಿಗಳು ಈ ಪ್ರವೃತ್ತಿಯ ಫಲವಾಗಿ ರಸವೇ ಮುಖ್ಯವಾದ ಕೃತಿಗಳನ್ನೂ ರಚಿಸಿದರು. ಕಾಲಾನುಕ್ರಮದಲ್ಲಿ ನಮ್ಮ ದೇಶಭಾಷೆಗಳಲ್ಲಿ ಕಾವ್ಯಗಳು ನಿರ್ಮಾಣವಾದುವು. ಇಲ್ಲಿಯೂ ಕಾವ್ಯ ಒಂದು ಮುಖದಲ್ಲಿ ಧರ್ಮದ ಕಡೆ ನೋಡುತ್ತಾ ಇನ್ನೊಂದು ಮುಖದಲ್ಲಿ ಜೀವನದ ಕಡೆ ನೋಡುತ್ತಾ ಬೆಳೆಯಿತು. ನಮ್ಮ ಭಾಷೆಯಲ್ಲಿ ಕಾವ್ಯ ಮುಟ್ಟಿದ ಒಂದು ಎತ್ತರ ಆದಿಪಂಪನಲ್ಲಿ ಕಾಣುತ್ತದೆ. ಅನಂತರ ಬಂದ ಸಾಹಿತ್ಯದಲ್ಲಿ ಬಸವಣ್ಣ, ಕುಮಾರವ್ಯಾಸ, ಲಕ್ಷ್ಮೀಶ, ರತ್ನಾಕರ ಕಾವ್ಯದಲ್ಲಿ ಉನ್ನತ ಸ್ಥಳಗಳನ್ನು ಸಾಧಿಸಿದರು. ರಾಷ್ಟ್ರದ ಇತರ ಭಾಷೆಗಳ ವಿಷಯವನ್ನು ಇಲ್ಲಿ ಹೇಳುವುದು ಸಾಧ್ಯವಲ್ಲ, ಅಷ್ಟು ಆವಶ್ಯಕವೂ ಅಲ್ಲ. ಕನ್ನಡ ನಾಡಿನಲ್ಲಿ ನಮ್ಮ ಜನ ಪಡೆದ ಕಾವ್ಯಾನುಭವವನ್ನು ಬೇರೆ ನಾಡುಗಳಲ್ಲಿ ಅಲ್ಲಿಯ ಜನರೂ ಪಡೆದಿದ್ದಾರೆ. ಅವರ ಭಾಷೆಗಳಲ್ಲಿಯೂ ಉತ್ತಮ ಕಾವ್ಯ ನಿರ್ಮಾಣ ಆಗಿದೆ.

ಈ ಸಾಹಿತ್ಯವೆಲ್ಲ ಜನತೆಯ ಸಂಸ್ಕೃತಿಯ ಫಲ, ಹಾಗೆಯೇ ಆ ಸಂಸ್ಕೃತಿಯನ್ನು ಮಾರ್ಪಡಿಸಿದ ಶಕ್ತಿ ; ಕವಿಯ ಭಾವ, ಅನುಭವ, ಶ್ರೇಷ್ಠ, ಉನ್ನತ ಆದಾಗ ಕಾವ್ಯ

ಶ್ರೇಷ್ಠ, ಉನ್ನತ ಆಯಿತು. ಈ ಗುಣಗಳಿಲ್ಲದಾಗ ಕೃತಿಯು ಆ ಗುಣಗಳನ್ನು ತೋರದೆ ಹೋಯಿತು. ಅಧ್ಯಾತ್ಮ ಅರ್ಥವಾಗಲೆಂದು ಅದ್ಭುತ ಕಥೆಗಳ ಮೂಲಕ ಅದನ್ನು ವಿವರಿಸಿದ ಕ್ರಮ, ಅಧ್ಯಾತ್ಮವನ್ನು ಸುಲಭ ಮಾಡಿದಂತೆ, ಅದ್ಭುತ ಎನ್ನುವುದನ್ನು ಅದ್ಭುತವೇ ಅಲ್ಲ ಎನ್ನುವಂತೆ ಸಾಮಾನ್ಯಮಾಡಿ ಮುಗಿಯಿತು. ದೈವವನ್ನು ಕುರಿತ ಹಲವು ಭಾವ ಬೇರೆ ಬೇರೆ ದೇವರು ಎಂಬಂತೆ ಕೃತಿಗಳನ್ನು ರಚಿಸಿದ ಜನ, ತಮ್ಮ ದೇವರು ಹೆಚ್ಚು, ಇನ್ನೊಬ್ಬರ ದೇವರು ಕಡಿಮೆ ಎಂಬ ಭಾವವನ್ನು ಅತಿರೇಕಕ್ಕೆ ಒಯ್ದರು. "ರುದ್ರೋ ನಾರಾಯಣಶ್ಚೈವ ತತ್ವಮೇಕಂ ದ್ವಿಧಾಕೃತಂ" ಎನ್ನುವುದು ಭಾರತದ ಒಂದು ವಾಕ್ಯ. ಆಮೇಲಿನ ಲೇಖಕರು ರುದ್ರ ನಾರಾಯಣರನ್ನು ಬೇರೆಯಾಗಿಯೇ ಭಾವಿಸಿದರು. ತಮ್ಮ ಭಾವನೆಗೆ ಅಡ್ಡಿಯಾಗುತ್ತದೆ ಎಂದೋ ಏನೋ ಕೆಲವರು ಭಾರತವನ್ನು ಪ್ರತಿಮಾಡುವಲ್ಲಿ ಆದರಿಂದ ಈ ವಾಕ್ಯವನ್ನು ಬಿಟ್ಟೇ ಬಿಟ್ಟರು. ಗ್ರಂಥದ ಕೆಲವು ಪಾಠಗಳಲ್ಲಿ ಈ ವಾಕ್ಯ ದೊರೆಯುವುದಿಲ್ಲ. ದೇವರುಗಳ ಪಾರಮ್ಯದ ವಾದ ಉಗ್ರವಾಗಿ ಬೆಳೆದ ದಿನದ ನಮ್ಮ ಒಂದು ರಗಳೆ ಕಾವ್ಯದಲ್ಲಿ ಬಂದಿರುವ ಒಂದು ಸಂಗತಿಯನ್ನು ನಮ್ಮ ಅಧ್ಯಾಪಕ ಮಿತ್ರರೊಬ್ಬರು ನನಗೆ ಒಮ್ಮೆ ವರ್ಣಿಸಿದರು. ಅದನ್ನು ಕೇಳುವುದೇ ನನಗೆ ಕಷ್ಟವಾಯಿತು. ಇಂಥ ಸಂಗತಿಯನ್ನು ನಮ್ಮ ಕವಿಯೊಬ್ಬರು ಬರೆದಿದ್ದಾರೆ; ಹೊಸ ಕಾಲದ ನಮ್ಮ ಅಧ್ಯಾಪಕರೊಬ್ಬರು ಇದು ಬರುವ ರಗಳೆ ಕಾವ್ಯವನ್ನು ಸಂಪಾದಿಸಿ ಪ್ರಕಟಿಸಿದ್ದಾರೆ; ನಮ್ಮ ವಿಶ್ವವಿದ್ಯಾನಿಲಯವೊಂದು, ಈ ಪುಸ್ತಕವನ್ನು ಪಠ್ಯವಾಗಿ ನೇಮಿಸಿದೆ. ನನಗೆ ಈ ಸಂಗತಿಯನ್ನು ಹೇಳಿದ ಅಧ್ಯಾಪಕ ಮಿತ್ರರು ಅದನ್ನು ಪಾಠ ಹೇಳಬೇಕಾಗಿ ಬಂದಿತು. ಪ್ರೌಢ ವಯಸ್ಸಿನ ಹೆಣ್ಮಕ್ಕಳು ಗಂಡುಮಕ್ಕಳು ಮೂರ್ತರಾಗಿದ್ದ ತರಗತಿಯಲ್ಲಿ, ಕಾವ್ಯದ ಈ ಭಾಗವನ್ನು ಪಾಠ ಹೇಳುವುದು ಬಹಳ ಕಷ್ಟ ಆಯಿತೆಂದು ಅವರು ಹೇಳಿದರು.

ಇದು ಇಂಥ ವಿಷಯವನ್ನು ಅತಿರೇಕಕ್ಕೆ ಒಯ್ದ ಒಂದು ಸಂದರ್ಭದ ಮಾತು. ವೀರಭಕ್ತಿಯ ವೈಷ್ಣವರು ಶಿವನನ್ನು, ವೀರಭಕ್ತಿಯ ಶೈವರು ವಿಷ್ಣುವನ್ನು ಹೀಯಾಳಿಸಲು ಬರೆದ ಇಂಥ ಬರಹ ನಮ್ಮಲ್ಲಿ ಬಹಳ ಇವೆ. ಇದರ ವಿವರಗಳನ್ನು ಈಗ ಬೆಳೆಸಿ ಹೇಳುವುದು ಅವಶ್ಯಕವಲ್ಲ. ಇಲ್ಲಿ ಪ್ರಕೃತವಾದ ಮಾತು ಇಷ್ಟು. ಇಂಥ ಭಾವ ಉನ್ನತವಲ್ಲದ ಕಾರಣದಿಂದ ಇಂಥ ಸಾಹಿತ್ಯದ ರಚನೆ ಕವಿಯನ್ನು ಒಂದು ಮಟ್ಟದಿಂದ ಮೇಲಕ್ಕೆ ಏರದಂತೆ ತಡೆಯಿತು. ಕೃತಿಯನ್ನು ಒಂದು ಸಂಕುಚಿತ ಭಾವದ ಪ್ರಸಾರಕ್ಕೆ ಮೀಸಲು ಮಾಡಿತು. ಇಂಥ ಕೃತಿಗಳನ್ನು ಓದಿದ ಜನರ ಮನಸ್ಸು ಈ ತಗ್ಗಿನಮಟ್ಟದ ಭಾವಗಳಲ್ಲೇ ಸುಳಿದು ದೈವ ಒಂದು ಎನ್ನುವ ಉದಾತ್ತ ಭಾವವನ್ನು ಅನುಭವಿಸುವ ಭಾಗ್ಯವನ್ನು ಕಾಣದೆಹೋಯಿತು.

ಕಾವ್ಯ ಉನ್ನತ ಭಾವದಿಂದ ಪ್ರೇರಿತವಾಗಿ ಉನ್ನತ ರೀತಿಯಲ್ಲಿ ಬೆಳೆದು ತನ್ನ ಕಾರ್ಯದಲ್ಲಿ ಸಿದ್ಧಿ ಗಳಿಸಿದರೆ, ಆದನ್ನು ರಚಿಸಿದವನು ಆದರ ಮೂಲದ ಭಾವವನ್ನು

ಪೂರ್ಣವಾಗಿ ಅನುಭವಿಸಿ ಸುಖಪಡುತ್ತಾನೆ. ಅವನ ಚೇತನ ಆ ಭಾವದಲ್ಲಿ ಭದ್ರವಾಗಿ ನಿಲ್ಲುತ್ತದೆ. ಭಾವ ಉನ್ನತ ಆದ್ದರಿಂದ ಚೇತನ ಉದಾತ್ತ ಆಗುತ್ತದೆ. ಕಾವ್ಯವನ್ನು ರಚಿಸಿದ ಮನುಷ್ಯನೇ ಆ ರಚನೆಯ ಫಲವಾಗಿ ಆಧ್ಯಾತ್ಮದಲ್ಲಿ ಮುಂದುವರಿಯುತ್ತಾನೆ, ಮೇಲಕ್ಕೆ ಏರುತ್ತಾನೆ.

ಭಾವ ಸುರೂಪವಾಗಿದ್ದು ಉಕ್ತಿ ಶಕ್ತ, ಚತುರ, ಆಗಿದ್ದು ಕಾವ್ಯಸಿದ್ಧಿಯನ್ನು ಮುಟ್ಟಿತಾದರೆ ಅದು ಅದನ್ನು ಓದುವವರ ಚೇತನದಲ್ಲಿ, ಅದರ ಕರ್ತೃವಿನ ಚೇತನದ ಅನುಭವವನ್ನು ಪ್ರತಿಮಾಡುತ್ತದೆ. ದೀಪದಿಂದ ದೀಪ ಹಚ್ಚಿಕೊಳ್ಳುವಂತೆ, ಕವಿಯ ಚೇತನದಿಂದ ಓದುವವನ ಚೇತನ ಜ್ಯೋತಿಯನ್ನು ಪಡೆಯುತ್ತದೆ. ಕೃತಿಯನ್ನು ಓದುವವನು ತಕ್ಕಷ್ಟು ಸಂಸ್ಕೃತವಾದ ಚೇತನ ಆದರೆ ಕೃತಿ ಒಡನೆ ಪರಿಣಾಮಕಾರಿ ಆಗುತ್ತದೆ. ಅಷ್ಟು ಸಂಸ್ಕೃತ ಅಲ್ಲದ ಚೇತನದಲ್ಲಿ ಪರಿಣಾಮ ಸ್ವಲ್ಪ ತಡವಾಗಿ ಆಗುತ್ತದೆ. ಕೆಲಸಮಯ ಸುಲಭವಾಗಿ ಅರ್ಥವನ್ನು ಗ್ರಹಿಸಿದ ಕಾವ್ಯಪ್ರೇಮಿ ತಾನು ಗ್ರಹಿಸಿದ ಅರ್ಥವನ್ನು ವಿವರಿಸಿ ಹೇಳಿ ಇತರರು ಅದನ್ನು ಗ್ರಹಿಸಲು ನೆರವಾಗುತ್ತಾನೆ. ಹೀಗೆ ಕಾವ್ಯ ಉಂಟುಮಾಡುವ ಪರಿಣಾಮ ಚೇತನದಿಂದ ಚೇತನಕ್ಕೆ ಹರಡುತ್ತದೆ. ಕವಿಯ ಜೀವ ಕಂಡ ಭಾವ ತಕ್ಕಷ್ಟು ಕಾಲ ತಕ್ಕಷ್ಟು ಚೇತನಗಳನ್ನು ಮತ್ತೆ ಮತ್ತೆ ಮುಟ್ಟಿತೆಂದರೆ ಈ ಪರಿಣಾಮ ವಿಸ್ತಾರವಾಗುವುದಲ್ಲದೆ ಸ್ಥಿರವೂ ಆಗುತ್ತದೆ. ಅನುಕೂಲ ಪರಿಸ್ಥಿತಿಯಲ್ಲಿ ಒಟ್ಟು ಜನಾಂಗವೇ ಈ ಭಾವದ ಪ್ರಭಾವಕ್ಕೆ ಈಡಾಗುತ್ತದೆ; ಅದರಿಂದ ಪರಿಷ್ಕೃತ ಆಗುತ್ತದೆ; ಅದರ ಫಲವಾಗಿ ಜೀವನವನ್ನು ಕುರಿತು ನಿಷ್ಕೃಷ್ಟವಾದ ಒಂದು ನಿಲುವನ್ನು ತಳೆಯುತ್ತದೆ, ಒಂದು ಗುರಿಯನ್ನು ಕಾಣುತ್ತದೆ; ಆ ಗುರಿಯನ್ನು ಸಾಧಿಸಬೇಕೆಂಬ ಆಶೆಯನ್ನು ಅಂತರ್ಯದಲ್ಲಿ ಅನುಭವಿಸುತ್ತದೆ. ಇದರ ಫಲವಾಗಿ ಚೇತನ ಸ್ಪಷ್ಟವಾಗಿ ಉದ್ದೇಶಿಸದೆ ಒಂದು ಧ್ಯೇಯವನ್ನು ಕಲ್ಪಿಸಿಕೊಳ್ಳುತ್ತದೆ; ಅದನ್ನು ಸಾಧಿಸಲು ಬಯಸುತ್ತದೆ. ಆ ಬಯಕೆಯ ಕಾರಣದಿಂದ ಆಧ್ಯಾತ್ಮಿಕವಾಗಿ ಒಂದು ಯತ್ನದಲ್ಲಿ ತೊಡಗುತ್ತದೆ; ಔನ್ನತ್ಯವನ್ನು ಅನುಭವಿಸುತ್ತದೆ. ಧ್ಯೇಯದ ದರ್ಶನ, ಅದನ್ನು ಸಾಧಿಸುವ ಅಪೇಕ್ಷೆ, ಸಾಧಿಸುವ ಯತ್ನ, ಇವುಗಳಿಂದ ಬರುವ ಔನ್ನತ್ಯ ಒಂದು ಸಮಾಜದಲ್ಲಿ ತಕ್ಕಷ್ಟು ಜನರಲ್ಲಿ ಕಂಡಾಗ ಆ ಸಮಾಜವೇ ಉದ್ಧಾರದತ್ತ ಮುಖ ಮಾಡಿ ನಡೆಯತೊಡಗುತ್ತದೆ. ಇದು ಕಾವ್ಯದಿಂದ ಆಗುವ ಕೆಲಸ.

ರಾಮಾಯಣ ಮಹಾಭಾರತ ಭರತವರ್ಷದಲ್ಲಿ ನಮ್ಮ ಜನರ ಬಾಳುವೆಯಲ್ಲಿ ಪಡೆದಿರುವ ಸ್ಥಾನವನ್ನು ನಾವೆಲ್ಲ ಬಲ್ಲೆವು. ಮೂಲತಃ ಆ ಗ್ರಂಥಗಳು ಶ್ರೇಷ್ಠ ಭಾವನೆಗಳನ್ನು ಪ್ರತಿಪಾದಿಸುವ ಉನ್ನತ ಧ್ಯೇಯದ ಕೃತಿಗಳು. ಅವುಗಳ ಉಕ್ತಿ ಸತ್ಯವನ್ನು ಮನಸ್ಸಿಗೆ ಮುಟ್ಟಿಸುವ ಶಕ್ತಿಯಿಂದ ತುಂಬಿದ್ದ ಕಾರಣ ಅವು ಜನಾಂಗದ ಧ್ಯೇಯವನ್ನು ರೂಪಿಸುವ ಕೃತಿಗಳಾದವು. ಸಾವಿರಾರು ವರ್ಷ ಜನತೆಯಲ್ಲಿ

ಪ್ರಸಾರ ಆಗಿ ಇವು ಜನಾಂಗದ ದಿನ ದಿನದ ಜೀವನದ ಒಂದು ಭಾಗವಾಗಿ ಬೆರೆತವು. ಶ್ರೀರಾಮ, ಸೀತಾದೇವಿ, ಲಕ್ಷ್ಮಣ, ಭರತ, ಹನುಮಂತ, ಶ್ರೀಕೃಷ್ಣ, ಯುಧಿಷ್ಠಿರ, ಕುಂತಿ, ಗಾಂಧಾರಿ, ಭೀಷ್ಮ, ಭೀಮ, ಅರ್ಜುನ, ದ್ರೌಪದಿ ಆದರ್ಶವ್ಯಕ್ತಿಗಳಾದರು. ಆ ಆದರ್ಶ ಬಹು ಎತ್ತರದ್ದು ಎಂದು ಕಂಡಲ್ಲಿ ಜನಾಂಗ ಆ ಆದರ್ಶ ಪುರುಷರನ್ನು ದೇವರ ಅವತಾರ ಎಂದೇ ನೆನೆಯಿತು. ರಾಮ, ಕೃಷ್ಣ, ಹೀಗೆ ಅವತಾರಪುರುಷ ರಾದರು. ಯುಧಿಷ್ಠಿರ, ವಿದುರರು ಧರ್ಮದೇವತೆಯ ಮಾನವ ರೂಪಗಳೆಂದು ಪೂಜೆ ಪಡೆದದ್ದು ಹೀಗೆಯೇ. ರಾಮಾಯಣ ಮಹಾಭಾರತವನ್ನು ಉದಾಹರಣೆಯಾಗಿ ಹೇಳಿದೆ. ಲೋಕದ ಇತಿಹಾಸದಲ್ಲಿ ಇಷ್ಟು ದೀರ್ಘಕಾಲ ಇಷ್ಟು ಸಂಖ್ಯೆಯ ಜನತೆ ಗಳಿಗೆ ಈ ಗ್ರಂಥಗಳು ಮಾಡಿರುವಷ್ಟು ಶುಭವನ್ನು ಮಾಡಿದ ಗ್ರಂಥ ಬೇರೆ ಇಲ್ಲ ಎಂದೇ ಹೇಳಬಹುದು. ಆದರೂ ಇತರ ಉನ್ನತ ಸಾಹಿತ್ಯ ಇವುಗಳೊಂದಿಗೆ ಹೋಲಿಸ ಬಹುದಾದ ಶುಭವನ್ನು ಸಾಧಿಸಿದೆ. ಲೋಕದ ಐವತ್ತು ಮಹಾಸಾಹಿತ್ಯಗಳ ಐವತ್ತು ಲೇಖಕರಾದರೂ ವ್ಯಾಸ, ವಾಲ್ಮೀಕಿಗಳ ಕಿರಿಯ ಸೋದರರಾಗಿ ಅವರ ಸಮೀಪದಲ್ಲಿ ನಿಲ್ಲಬಲ್ಲ ಯೋಗ್ಯತೆಯ ಕವಿಗಳಾಗಿ ಬೆಳಗಿದ್ದಾರೆ. ಕವಿ ನೂತನ ಬ್ರಹ್ಮ ಎಂಬ ವಾಕ್ಯ ಇವರೆಲ್ಲರನ್ನು ಕುರಿತೂ ಯುಕ್ತ ಆಗುತ್ತದೆ.

೬

ಸಮಾಜ ಸಂಸ್ಕಾರ ಪಡೆಯುತ್ತದೆ, ಎನ್ನುವುದರ ಅರ್ಥ ಸಮಾಜದ ಅನೇಕ ವ್ಯಕ್ತಿಗಳು ಸಂಸ್ಕಾರವನ್ನು ಪಡೆಯುತ್ತಾರೆ ಎನ್ನುವುದು ಎಂದಿದೆ. ದೇಶ, ಕಾಲ, ಭಾಷೆ, ಬೇರೆ ಆದಂತೆ ಜನಸಮುದಾಯಗಳ ಮೇಲೆ ಪರಿಣಾಮ ಬೀರಿದ ಕೃತಿಗಳೂ ಬೇರೆಯಾಗುತ್ತವೆ. ಯಾವ ಜೀವನದಲ್ಲಿ ಯಾವ ಕಾವ್ಯಗಳು ಯಾವ ಪರಿಣಾಮ ವನ್ನು ಮಾಡಿದವೆನ್ನುವುದು ವಿವರವಾಗಿ ನೋಡಿ ತಿಳಿಯಬೇಕಾದ ವಿಷಯ. ಒಂದು ಜೀವನದಲ್ಲಿ ಯಾವ ಕಾವ್ಯ ಯಾವ ಪರಿಣಾಮವನ್ನು ಉಂಟುಮಾಡಿದವೆನ್ನುವುದನ್ನು ವಿವರವಾಗಿ ನೋಡಿದರೆ, ಕಾವ್ಯದಿಂದ ಆಗುವ ಕೆಲಸದ ಸ್ವರೂಪ ನಮಗೆ ಮನ ದಟ್ಟಾಗುತ್ತದೆ. ನಮ್ಮ ನಮ್ಮ ಜೀವನದಲ್ಲಿ ಯಾವ ಕಾವ್ಯ ಯಾವ ವೇಳೆ ಚೇತನ ವನ್ನು ಸೋಕಿ ಯಾವ ಪರಿಣಾಮವನ್ನುಂಟುಮಾಡಿತು ಎಂದು ವಿವರಿಸುವುದು ಇದಕ್ಕೆ ಒಂದು ನಿದರ್ಶನವಾದೀತು. ಆದ್ದರಿಂದ ನನ್ನ ಬಾಳುವೆಯಲ್ಲಿ ಕಾವ್ಯ ವಹಿಸಿದ ಹೊಣೆಯನ್ನು ಸ್ವಲ್ಪ ವಿವರವಾಗಿ ಅರಿಕೆ ಮಾಡಲು ಅಪ್ಪಣೆ ಬೇಡುತ್ತೇನೆ.

ನನಗೆ ನೆನಪಿರುವಂತೆ ನಾನು ತೀರ ಮೊದಲಲ್ಲಿ ಕೇಳಿದ ಕಾವ್ಯ ಎಂದರೆ ಜೈಮಿನಿ ಭಾರತ. ಮೊದಲು ಕೇಳಿದಾಗ ನನಗೆ ಅದರ ಅರ್ಥ ತಿಳಿಯಲಿಲ್ಲ ಎಂದು ನಾನು ಹೇಳಬೇಕಾಗಿಲ್ಲ. ಆದರೂ, "ಶ್ರೀವಧುವಿನಂಬಕ ಚಕೋರಕಂ ಪೊರೆಯೆ ...." ಎನ್ನುವ ಆ ಮೊದಲ ಪದ್ಯ ಅರ್ಥವಾಗದೆಯೇ ನನ್ನ ಮನಸ್ಸನ್ನು ಸೆರೆ ಹಿಡಿ ಯಿತು. ಸ್ವಲ್ಪ ಕಾಲದ ಬಳಿಕ ಪದ್ಯದ ಅರ್ಥ ತಿಳಿಯಿತು. ಅದರಿಂದ ನನಗೆ

ಬಂದ ಸಂತೋಷ ಹೆಚ್ಚಿತು. ಹೀಗಿದ್ದೂ ಲಕ್ಷ್ಮೀಶನ ಪೀಠಿಕಾ ಸಂಧಿಯ ಪದ್ಯಗಳ ಭಾವ ನನಗೆ ದಿಟವಾಗಿ ಮನಮುಟ್ಟಿದ್ದು ನಾನು ನನ್ನ ಮೂವತ್ತನೆಯ ವಯಸ್ಸಿನಲ್ಲಿ ಲಕ್ಷ್ಮೀಶನ ದೇವನೂರಿಗೆ ಹೋದಾಗ. ದೇವನೂರಿನ ಕೆರೆ ನಾನು ಅಲ್ಲಿಗೆ ಹೋದ ದಿನದಲ್ಲಿ ನೀರು ತುಂಬಿ ನಿಂತಿತ್ತು. ಅಮಲ ಸೌಭಾಗ್ಯ ರತ್ನಾಕರ ಆಗಿ ಕಾಣುತ್ತಿತ್ತು. ನಾನು ಇಳಿದುಕೊಂಡಿದ್ದ ವಸತಿಗೃಹದ ಹಿಂದೆ ಪುರಾತನ ಗಂಗಾಧರನ ದೇವಾಲಯ ಇತ್ತು. ಉದಯದಲ್ಲಿ ವಸತಿಗೃಹದ ಎದುರಲ್ಲಿ ನಿಂತರೆ ಕಣ್ಣು ಹರಿಯುವಷ್ಟು ದೂರ ಹರಿದಿರುವ ಬಯಲು, ದೂರದಲ್ಲಿ ಸೂರ್ಯನ ಉದಯ, ಆಕಾಶದ ಸಿಂಧೂರ ವರ್ಣ. "ಶ್ರೀವಧುವಿನಂಬಕ ಚಕೋರಕಂ ಪೊರೆಯೆ" ಪದ್ಯ, "ಪಾವನತುಲಾಭರಣಮಂ ಮಾಡಿಕೊಂಡೆಸೆವ ಪಾವನತರ ಸ್ವರೂಪಂ" ಪದ್ಯ, "ಪ್ರಸ್ತುತದೊಳೊಗೆವ ಮುಂಬೆಳಗಮಲ ದಂತದ ಗಭಸ್ತಿ" ಪದ್ಯ, ಜೀವನದ ಯಾವ ಆವರಣದಿಂದ ಪ್ರೇರಣೆಯನ್ನು ಪಡೆದವು ಎಂಬುದು ತಿಳಿಯುವಂತಿತ್ತು. ಜೈಮಿನಿ ಭಾರತದ ಪದ್ಯಗಳನ್ನು ಕೇಳಿದ ಎಳೆಯ ದಿನಗಳಲ್ಲಿ ನಮಗೆ ನಮ್ಮ ತಾತ ಆಂಧ್ರ ಕವಿಗಳಾದ ಶ್ರೀನಾಥ ಬೊಮ್ಮನರ ಒಂದು ಕಥೆಯನ್ನು ಹೇಳಿ ಬೊಮ್ಮನ ಕವಿಯ "ಬಾಲರಸಾಲ" ಎಂದು ಆರಂಭವಾಗುವ ಒಂದು ಪದ್ಯವನ್ನು ಹಾಡಿದ್ದರು. "ಮಾವಿನ ಎಳೆಯ ತಳಿರಂತೆ ಕೋಮಲವಾದ ಬೆರಳುಗಳ ಕಾನ್ಯಕನ್ನಿಕೆಯನ್ನು ಖೂಳರಿಗೆ ಒಪ್ಪಿಸಿ, ಧನ ಪಡೆದು, ರುಚಿಯಾದ ಊಟವನ್ನು ಮಾಡುವುದಕ್ಕಿಂತ ಕವಿಗಳು ತಾವಿರುವಲ್ಲೇ ಇದ್ದು, ನೆಲವನ್ನು ಅಗೆದು, ತಮ್ಮ ತಮ್ಮ ಮನೆಯವರ, ತಮ್ಮ ಮಕ್ಕಳ, ಉದರ ಪೋಷಣಕ್ಕಾಗಿ ಬೇಕಾದದ್ದನ್ನು ಗಳಿಸುವುದು ಚೆನ್ನ." ಈ ಸುಮಾರಿನಲ್ಲಿ ನನ್ನ ಕಿವಿಗೆ ಬಿದ್ದ ಈ ಕವಿಯ ಇನ್ನೊಂದು ಪದ್ಯ ಅದೇ ಭಾಗವತ ಕಾವ್ಯದ "ಇಂದು ಗಲಡಿಂದು ಲೇದನಿ ಸಂದೇಹಮು ವಲದು" ಎಂಬ ಕಂದ. "ವಿಷ್ಣು ಇಲ್ಲಿ ಇದ್ದಾನೆ, ಇಲ್ಲಿ ಇಲ್ಲ ಎಂಬ ಸಂದೇಹ ಬೇಡ; ಅವನ ಎಲ್ಲೆಡೆಯೂ ಇದ್ದಾನೆ, ಎಲ್ಲೆಲ್ಲಿ ಅರಸಿದರೆ ಅಲ್ಲಲ್ಲಿ ಕಾಣುತ್ತಾನೆ, ಅಪ್ಪಾಜಿ" ಎಂದು ಪ್ರಹ್ಲಾದನು ತಂದೆಗೆ ಅರಿಕೆ ಮಾಡುತ್ತಾನೆ. ಇದೇ ದಿನಗಳಲ್ಲಿ ನಾನು ನಮ್ಮ ಬಾಲಬೋಧೆ ಪುಸ್ತಕದ ಕೊನೆಗಿದ್ದ "ಯಾಕಳುವೆ ಎಲೆರಂಗ" ಎಂದು ಮೊದಲಾಗುವ ನಾಲ್ಕು ಜಾನಪದ ಪದ್ಯಗಳನ್ನು ಕಲಿತೆನು. ಆಗಲೇ ಗೋವಿನ ಕಥೆ, ಭಾಗಾ ನಗರದ ಕಥೆ, ಇವನ್ನು ಓದಿದೆನು. ಗೋವಿನ ಕಥೆಯ ಪದ್ಯ ಹಲವು ಪಾಠಪುಸ್ತಕದಲ್ಲಿದ್ದವು. ನಮ್ಮ ತರಗತಿಯ ಹುಡುಗರೆಲ್ಲ ಅದನ್ನು ಬಾಯಿಪಾಠಮಾಡಿದ್ದರು. ಕಥೆ ಎಳೆಯ ಮಾವಿನ ಮರದ ಕೆಳಗೆ ನಿಂತು ಕೊಳಲನೂದುತ ಗೋವಳ ಹಸುವನ್ನು ಬಳಿಗೆ ಕರೆದದ್ದನ್ನು ವರ್ಣಿಸುತ್ತದೆ. ಹಾಲು ಕರೆದದ್ದನ್ನು ವರ್ಣಿಸುತ್ತದೆ. ಹಸಿದ ಹುಲಿ, ಹೆದರಿದ ದನಗಳು, ಮಗುವಿಗೆ ಹಾಲು ಕುಡಿಸಲು ಬರುವ ಹಸುಗಳನ್ನು ವರ್ಣಿಸುತ್ತದೆ. ದೊಡ್ಡಿಗೆ ಬಂದ ಹಸು, ಅಲ್ಲಿ ನಡೆದ ಮಾತು, ಕೊಟ್ಟಮಾತನ್ನು ನಡೆಸಲು

ಅದು ಗುಹೆಗೆ ಬರುವುದು, ಹುಲಿ ಈ ಸತ್ಯಕ್ಕೆ ಆಶ್ಚರ್ಯಪಟ್ಟು ನಿನ್ನನ್ನು ಕೊಂದರೆ ಪಾಪ ಎಂದು ಅಲ್ಲೇ ಪ್ರಾಣಬಿಟ್ಟದ್ದು, ಈ ಎಲ್ಲ ಕಥೆ ನನಗೆ ಎಷ್ಟು ದಿಟವಾಗಿತ್ತು, ಎಷ್ಟು ಹರ್ಷ ಕೊಟ್ಟಿತು, ಇದನ್ನು ನಾನು ಹೇಳಲಾರೆ. ಗೋವಿನ ಕಥೆ ನನ್ನ ಮನಸ್ಸಿನಲ್ಲಿ ನಿರ್ಮಿಸಿದ ಪ್ರಕೃತಿಚಿತ್ರ ಬಹು ಪ್ರಭಾವಶಾಲಿ. ಈ ಪ್ರಭಾವ ಎಷ್ಟು ಆಯಿತೆಂದರೆ, ವಯಸ್ಸಾದಮೇಲೆ ನಾನು ನಮ್ಮ ನಾಡಿನ ಸಮೃದ್ಧ ಪ್ರದೇಶಗಳಲ್ಲಿ ಸುತ್ತಾಡುವಾಗ ನಾಲ್ಕುಮರ ಗುಂಪಾಗಿ ಕಂಡ ಸ್ಥಳದಲ್ಲೆಲ್ಲಾ ನನ್ನ ಮನಸ್ಸು ಈ ಗೊಲ್ಲನನ್ನು ಕಾಣುತ್ತಿತ್ತು; ಅವನ ಹಸುಗಳನ್ನು ಕಾಣುತ್ತಿತ್ತು. ಬಹು ಸುಲಭವಾಗಿ ಅವನು ಶ್ರೀ ಕೃಷ್ಣ ಆದನು. ಆ ಹಸು ಬೃಂದಾವನದ ಗೋವು ಆದವು. ಕೆಲವು ವರ್ಷಗಳ ಬಳಿಕ ನನಗೆ ಕಾಳಿದಾಸನ ದಿಲೀಪ ಚರಿತೆ, ಅಜನೃಪ ಚರಿತೆಗಳ ಪರಿಚಯು ದೊರೆಯಿತು. ಕಾಳಿದಾಸನ ಕಾವ್ಯದ ಈ ಭಾಗ ನನ್ನ ಮನಸ್ಸಿಗೆ ಸುಂದರವಾದ ಪ್ರಕೃತಿಚಿತ್ರಗಳನ್ನು, ಮಾನವ ಸ್ವಭಾವ ಬಯಸುವ ರಮ್ಯವಾದ ಅದ್ಭುತಗಳನ್ನು ಒದಗಿಸಿ ಸುಖ ಕೊಟ್ಟಿತು. ಮನಸ್ಸನ್ನು ತಿದ್ದಿತು.

ಹೈಸ್ಕೂಲಿನ ಮೊದಲನೆಯ ತರಗತಿಯಲ್ಲಿ ನಮ್ಮ ಪಾಠದ ಪುಸ್ತಕದಲ್ಲಿ ಬೈಬಲ್ಲಿನ ಒಂದು ಕಥೆಯನ್ನು ಹೇಳಿರುವ :

'The Assyrian came down like the wolf on the fold,'

ಎನ್ನುವ ಪದ್ಯವಿತ್ತು. ಇದು ಬೈರನ್ ಕವಿಯ ಕೃತಿ. ಬಹುಚೆನ್ನಾದ ಕವಿತೆ. ಆ ತರಗತಿಯಲ್ಲಿ ಅದರ ಎಲ್ಲ ಗುಣವನ್ನು ಗ್ರಹಿಸುವುದು ಸಾಧ್ಯವಾಗಿರಲಿಲ್ಲ. ಆದರೂ ಅರ್ಥವಾದಷ್ಟರಲ್ಲೇ ಅದರಿಂದ ಮನಸ್ಸಿಗೆ ತುಂಬಾ ಸಂತೋಷವಾಯಿತು. ಪದ್ಯದ ಒಂದು ಪಂಕ್ತಿ:

' And the blue wave rolls nightly on deep Galilee, '

ಅದೇನೊ ಕಿವಿಗೆ ಚೆನ್ನಾಗಿ ಕಂಡಿತು. ಅದರ ಮುಂದಿನ ವರ್ಷ ಪಾಠದ ಪುಸ್ತಕದಲ್ಲಿ ಎರಡು ಪದ್ಯ ಹೀಗೆಯೇ ನನಗೆ ಬಹಳ ರುಚಿಸಿದವು. ಒಂದು ಯೂಸುಫ್ ಎನ್ನುವುದು. ಅದನ್ನು ಬರೆದವರು ಯಾರು ಎನ್ನುವುದು ಖಚಿತವಾಗಿ ನೆನಪಿಲ್ಲ. ಲವೆಲ್ ಕವಿ ಇರಬೇಕು. ಇನ್ನೊಂದು, The nightingale and the glow-worm ಎಂಬುದು. ಇದು ಕೌಪರ್ ಕವಿಯ ಪದ್ಯ.

"A stranger came one night to Yusuf's tent" ಎಂದು ಯೂಸುಫ್ ಪದ್ಯ ಆರಂಭವಾಗುತ್ತದೆ. ಯೂಸುಫ್ ಅರಬ್ಬಿಯ ಒಂದು ಪಂಗಡದ ಪ್ರಭು. ಅವನ ಮಗನನ್ನು ಯಾರೋ ಕೊಂದಿದ್ದಾರೆ. ಕೊಲೆ ಮಾಡಿದವನನ್ನು ಕೊಂದು ಕೊಲೆಯಾದವನ ಆತ್ಮವನ್ನು ತಣಿಸಬೇಕೆಂಬುದು ಇವರ ಸಂಪ್ರದಾಯ. ಯೂಸುಫ್‌ನ ಅನುಯಾಯಿಗಳು ಕೊಲೆಗಾರನನ್ನು ಅಟ್ಟಿಸಿಕೊಂಡು ಹೋಗಿದ್ದಾರೆ. ಮಧ್ಯೆ ಇವನ ಡೇರೆಗೆ ಅಪರಿಚಿತ ಒಬ್ಬ ಓಡಿಬರುತ್ತಾನೆ. ಇವನ ರಕ್ಷಣೆಯನ್ನು ಬೇಡುತ್ತಾನೆ. ಇಂಥ

ವೇಳೆ ರಕ್ಷಣೆ ಕೊಡುವುದು ಸಹ ಇವರ ಸಂಪ್ರದಾಯ. ಬಂದವನಿಗೆ ಯೂಸುಫ್ ರಕ್ಷಣೆ ಕೊಡಲೊಪ್ಪುತ್ತಾನೆ. ಅವನಿಗೆ ಆತಿಥ್ಯ ನೀಡುತ್ತಾನೆ. ಆತಿಥ್ಯ ಪಡೆದು ಆ ಮನುಷ್ಯ ನಿನ್ನ ಮಗನನ್ನು ಕೊಂದದ್ದು ನಾನು ಎನ್ನುತ್ತಾನೆ. ಯೂಸುಫ್ ಮಗನ ಕೊಲೆಗಾರನನ್ನು ಕೊಲ್ಲಬೇಕು, ಆದರೆ ಮರೆಹೊಕ್ಕವನನ್ನು ಕಾಪಾಡಲೂ ಬೇಕು. ಮೊದಲ ಧರ್ಮವನ್ನು ಮೀರಿದ್ದು ಎರಡನೇ ಧರ್ಮ. ಅವನು ಮಗನ ಕೊಲೆಗಾರನನ್ನು ಕಾಪಾಡಲು ನಿಶ್ಚಯಿಸಿದನು. ನನ್ನ ಜನ ಹಿಂದಿರುಗಿ ಬಂದರೆ, ನಿನ್ನನ್ನು ಬಿಡಲು ಒಪ್ಪದೇ ಹೋದಾರು, ನೀನು ಈಗಲೇ ಹೊರಟುಬಿಡು, ಎಂದನು. ಕೊಲೆಗಾರನಿಗೆ ತನ್ನ ಕುದುರೆಯನ್ನು ಕೊಟ್ಟು ಅವನನ್ನು ಕಳುಹಿಸಿಬಿಟ್ಟನು. ಆ ದಿನಗಳಲ್ಲಿ ಪದ್ಯವೆಲ್ಲ ನನಗೆ ಬಾಯಿಗೆ ಬರುತ್ತಿತ್ತು. ಈಗ ಕೆಲವು ಪಂಕ್ತಿಗಳು ಮಾತ್ರ ಜ್ಞಾಪಕ ಇವೆ.

As one lamp lights another nor grows less
So nobleness enkindleth nobleness

ಎಂಬವು ಎರಡು ಪಂಕ್ತಿ.

First born for whom by day and night I yearn
Balanced and just are all of God's decrees

ಎಂಬವು ಇನ್ನೆರಡು ಪಂಕ್ತಿ. ದೀಪದಿಂದ ದೀಪ ಹಚ್ಚಿಕೊಳ್ಳುವಂತೆ ಒಬ್ಬನ ಉದಾತ್ತ ವರ್ತನೆಯಿಂದ ಎದುರಾಳಿಯಲ್ಲಿ ಉದಾತ್ತವರ್ತನೆ ಮೂಡುತ್ತದೆ. ಈ ಮಾತು ನನ್ನ ಮನಸ್ಸಿನಮೇಲೆ ಬಹು ಪರಿಣಾಮಮಾಡಿತು. "ನಿನ್ನನ್ನು ಕೊಲೆ ಮಾಡಿದವನನ್ನು ನಾನು ಕೊಲ್ಲದೇ ಕಾಪಾಡುತ್ತಿದ್ದೇನೆ. ಓ! ನನ್ನ ಹಿರಿಯ ಮಗನೇ; ನಾನು ನಿನ್ನನ್ನು ಹಗಲಿರುಳು ಅಕ್ಕರೆಯಿಂದ ನೆನೆಯುತ್ತಿದ್ದೇನೆ. ಇವನನ್ನು ಕೊಲ್ಲದೆ ಬಿಡುತ್ತೇನೆಂದು ಬೇಸರಬೇಡ. ದೈವ ಇವನನ್ನು ಉಳಿಸಲು ನಿಶ್ಚಯಿಸಿದೆ. ದೇವರ ಈ ನಿಶ್ಚಯ ಯುಕ್ತ ಮತ್ತು ನ್ಯಾಯ." ಮಗನನ್ನು ಕಳೆದುಕೊಂಡ ತಂದೆಯ ಈ ಮಾತು ಕೂಡ ನನಗೆ ಬಹು ಚೆನ್ನವೆಂದು ಕಂಡಿತು.

ಕೌಪರ್ ಕವಿಯ The nightingale and the glow worm ಕವನ ಇನ್ನೊಂದು ರೀತಿಯಲ್ಲಿ ಚೆನ್ನ. ಇರುಳಕೋಗಿಲೆಯೊಂದು ಹಗಲೆಲ್ಲ ಹಾಡಿ ಗ್ರಾಮದ ಜನರ ಮನಸ್ಸನ್ನು ಸಂತೋಷಪಡಿಸಿತ್ತು. ಸಂಜೆಯಾದರೂ ಹಾಡುವುದನ್ನು ನಿಲ್ಲಿಸದೆ ಹಾಡಿತ್ತು. ಇಷ್ಟು ದುಡಿದು ಇದ್ದ ಕಾರಣ ತೀರ ಸಹಜವಾಗಿ ಅದಕ್ಕೆ ಹಸಿವಾಯಿತು. ಆಹಾರಕ್ಕೆ ಏನು ಮಾಡುವುದೆಂದು ಅದು ಸುತ್ತ ನೋಡಿತು; ಬದಿಯ ಒಂದು ಗಿಡದ ಒಂದು ಕೊಂಬೆಯ ಮೇಲೆ ಕುಳಿತು ಮಿನುಗುತ್ತಿರುವ ಒಂದು ಮಿಣುಕು ಹುಳುವನ್ನು ಕಂಡಿತು, ಅದನ್ನು ತಿನ್ನಲು ಅದರ ಮೇಲೆ ಎರಗಿತು. ಮಿಂಚುಹುಳು ಅದಕ್ಕೆ, "ಸ್ವಲ್ಪ ತಡಿ, ನನ್ನ ಮಾತನ್ನು ಕೇಳು," ಎಂದಿತು. ಕೋಗಿಲೆ, "ಏನು ಮಾತು ಹೇಳು," ಎಂದು ಕೇಳಿತು. ಹುಳು, "ಇಕೋ

ನೋಡು; ನೀನು ಹಗಲೂ ಇರುಳೂ ಹಾಡುತ್ತೀಯೆ, ಕೇಳುವವರಿಗೆ ಸಂತೋಷ ನೀಡುತ್ತೀಯೆ; ನಾನು ಎಲ್ಲೋ ಒಂದು ಕಡೆ ಕುಳಿತು ನನ್ನ ಸುತ್ತನ್ನು ಬೆಳಕಿನಿಂದ ಬೆಳಗುತ್ತೇನೆ, ಚೆಲುವನ್ನು ಹರಡುತ್ತೇನೆ. ನಮ್ಮಿಬ್ಬರನ್ನೂ ದೇವರೇ ಮಾಡಿದ್ದಾನೆ. ರಾತ್ರಿಯನ್ನು ನೀನು ಹಾಡಿನಿಂದ ಹರುಷಗೊಳಿಸಬೇಕು, ನಾನು ಬೆಳಕಿನಿಂದ ಅಂದ ಗೊಳಿಸಬೇಕು, ಎನ್ನುವುದು ಅವನ ಉದ್ದೇಶ. ನೀನು ನನ್ನನ್ನು ನಾಶಮಾಡ ಬಾರದು," ಎಂದಿತು.

The songster heard this short oration
And warbling out his approbation
Released him, as my story tells,
And found his supper somewhere else.

ಪುಟ್ಟ ಭಾಷಣವನ್ನು ಕೇಳಿ ಕೋಗಿಲೆ ಮಿಂಚು ಹುಳುವನ್ನು ಜೀವದೊಂದಿಗೆ ಬಿಟ್ಟಿತು. ಬೇರೆ ಆಹಾರವನ್ನು ಪಡೆಯಲು ಹೊರಟಿತು.

ಗೋವಿನ ಕಥೆಯ ಹಸು ಹುಲಿಯಂತೆ ಈ ಕೋಗಿಲೆ ಈ ಹುಳು ಕಲ್ಪನೆಯ ಲೋಕದ ಜಂತುಗಳು. ಒಂದು ತತ್ತ್ವದ ಪ್ರತಿಪಾದನೆಗಾಗಿ ನಿರ್ಮಾಣವಾಗಿವೆ. ಕಾರಣ ಇವು ವಾಸ್ತವ ಅಲ್ಲದಿದ್ದರೂ ನಾವು ಇವನ್ನು ಅಂಗೀಕರಿಸುತ್ತೇವೆ.

ಹೈಸ್ಕೂಲಿನಲ್ಲಿ ಪಾಠದಲ್ಲಿ ಬಂದ ಇನ್ನೆರಡು ಕವಿತೆ ಸ್ಕಾಟ್ ಕವಿಯ Breathes there a man with soul so deadಎಂದು ಆರಂಭವಾಗುವ ಹತ್ತು ಪಂಕ್ತಿ ಮತ್ತು Barbara Fritchie ಎಂಬ ಒಂದು ಕಥನಕವನ. "ಇದು ನನ್ನ ದೇಶ, ನನ್ನ ಹುಟ್ಟುನೆಲ, ಎಂದುಕೊಳ್ಳದ ರೀತಿ, ಚೇತನ ಮೃತವಾಗಿರುವ ಮನುಷ್ಯ ಯಾವ ನಾದರೂ ಲೋಕದಲ್ಲುಂಟೇ? ಪರದೇಶದಲ್ಲಿ ಸುತ್ತಿ ಹುಟ್ಟಿದೂರ ಕಡೆ ಹೊರಟು ಬರುವಾಗ ಎದೆ ಕಾವು ಏರದ ಒಬ್ಬ ಮನುಷ್ಯ ಇರಬಹುದೇ? ಇರುವನಾದರೆ ಹೋಗಿ ಅವನನ್ನು ನಿಟ್ಟಿಸಿ ನೋಡು. ಅವನ ಸ್ಥಾನ ಎಂಥದಿರಲಿ, ಅಧಿಕಾರ ಏನೇ ಇರಲಿ, ಆ ಪ್ರಾಣಿ ಬೇರೆ ಯಾವ ಉನ್ನತ ಭಾವವೂ ಇಲ್ಲದೆ ತನ್ನ ಕ್ಷುದ್ರ ಜೀವ ಎಷ್ಟೋ ಅಷ್ಟನ್ನು ನೋಡಿಕೊಂಡು ತೃಪ್ತನಾಗುವ ಅಲ್ಪನಾಗಿರುತ್ತಾನೆ. ಕೀರ್ತಿಯ ಲೇಶವಿಲ್ಲದೆ ಕಣ್ಣುಮುಚ್ಚಿ ಹುಟ್ಟುನೆಲದಲ್ಲೇ ಹುಗಿದು ಮುಗಿಯುತ್ತಾನೆ. ಅವನಿಗಾಗಿ ಯಾರೂ ಅಳುವುದಿಲ್ಲ. ಅವನನ್ನು ಯಾರೂ ಹೊಗಳುವುದಿಲ್ಲ. ಅವ ನನ್ನು ಯಾರೂ ಗೌರವಿಸುವುದಿಲ್ಲ." ಸ್ಕಾಟ್ ಕವಿಯ ಪಂಕ್ತಿಗಳ ಅರ್ಥ ಇದು. ನಮ್ಮ ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಆರಂಭಿಸಿದ ಕಾಲ ಅದು. ಈ ಪದ್ಯ ವಿದ್ಯಾರ್ಥಿಗಳಮೇಲೆ ಎಂಥ ಪರಿಣಾಮವುಂಟುಮಾಡಿತು ಹೇಳಲು ಸಾಧ್ಯವಿಲ್ಲ. Barbara Fritchie ಹತ್ತಿರ ಹತ್ತಿರ ಇದೇ ಭಾವದ ಒಂದು ಕಥೆ. Frederick town ಅಮೆರಿಕದ ಒಂದು ದೊಡ್ಡ ನಗರ. ಕ್ರಿಸ್ತ ಶಕ ೧೮೬೧ ರ ಆ ರಾಷ್ಟ್ರದ ಒಳ ಕದನದಲ್ಲಿ

ದಕ್ಷಿಣದ ಕೆಲವು ಪ್ರಾಂತಗಳು ತಾವು ಬೇರೆ ಆಗಬೇಕೆಂದು ಯತ್ನಿಸಿ ಯುದ್ಧ ವನ್ನಾರಂಭಿಸಿದವು. ಉತ್ತರದ ಪ್ರಾಂತಗಳು ಇದನ್ನು ಒಪ್ಪುವುದಿಲ್ಲ ಎಂದವು. ಅಧ್ಯಕ್ಷ ಏಬ್ರಹಾಂ ಲಿಂಕನ್ ರಾಷ್ಟ್ರದ ಪರವಾಗಿ ಯುದ್ಧವನ್ನು ನಡೆಸಿದನು. ದಕ್ಷಿಣದ ಪ್ರಾಂತಗಳ ದ್ರೋಹಿಸೇನೆಗಳ ನಾಯಕ ಜನರಲ್ ಲೀ ಎಂಬ ಸೈನ್ಯಾಧಿಕಾರಿ. ಒಂದು ದಳದೊಡನೆ ಪ್ರಯಾಣಮಾಡುತ್ತಾ ಗ್ರಾಮಗಳನ್ನು ನಗರ ಗಳನ್ನು ಸ್ವಾಧೀನ ಮಾಡಿಕೊಳ್ಳುತ್ತಾ ಇವನು ಮುಂದೆ ಬರುತ್ತಿದ್ದಾನೆ. ಫ್ರೆಡರಿಕ್ ಟೌನ್ ಇವನಿಗೆ ಸ್ವಾಧೀನ ಆಯಿತು. ಹೀಗೆ ಸ್ವಾಧೀನ ಆದ ಊರುಗಳಲ್ಲಿ ರಾಷ್ಟ್ರದ ಧ್ವಜವನ್ನು ಯಾರೂ ಏರಿಸಕೂಡದು ಎಂದು ಇವನಾಜ್ಞೆ. ಊರಿನ ಜನವೆಲ್ಲ ಧ್ವಜ ಗಳನ್ನು ಇಳಿಸಿಬಿಟ್ಟರು. ಬಾರ್ಬರಾ ಫ್ರಿಟ್ಚಿ ಎಂಬ ಒಬ್ಬ ಮುದುಕಿ ಅದನ್ನು ಇಳಿಸಲು ಒಪ್ಪಲಿಲ್ಲ. ವಿದ್ರೋಹಿ ಸೈನ್ಯಗಳು ಊರಿನ ದೊಡ್ಡ ಬೀದಿಗಳಲ್ಲಿ ನಡೆದು ಬರುತ್ತವೆ. ಈ ಮುದುಕಿ ಮನೆಯ ಮಹಡಿಯ ಒಂದು ಕಿಟಕಿಯಿಂದ ತಲೆಯನ್ನು ಹೊರಕ್ಕೆ ಇಕ್ಕಿ ರಾಷ್ಟ್ರದ ಧ್ವಜವನ್ನು ಕೈಯಲ್ಲಿ ಹಿಡಿದು ಆಡಿಸುತ್ತಾಳೆ. ಇದಕ್ಕೆ ಒಂದೇ ಶಿಕ್ಷೆ. ಅವಳನ್ನು ಗುಂಡಿಕ್ಕಿ ಕೊಲ್ಲಬೇಕು. ಸೈನಿಕರು ನಿಂತು, ಧ್ವಜವನ್ನು ಹಿಂದಕ್ಕೆ ತೆಗೆದುಕೋ, ಇಲ್ಲವಾದರೆ ಕೊಲ್ಲುತ್ತೇವೆ ಎನ್ನುತ್ತಿದ್ದಾರೆ. ಹಿಂದೆ ಕುದುರೆಯೇರಿ ಬರುತ್ತಿದ್ದ ಜನರಲ್ ಲೀ ಈ ವೇಳೆಗೆ ಅಲ್ಲಿಗೆ ಬರುತ್ತಾನೆ. ಸಂಗತಿಯನ್ನು ಗ್ರಹಿಸು ತ್ತಾನೆ. ಮುದುಕಿ ತನ್ನ ಆಜ್ಞೆಯನ್ನು ಉಲ್ಲಂಘಿಸಿ ನಡೆಯುತ್ತಿದ್ದಾಳೆ; ಅವಳನ್ನು ಕೊಲ್ಲಬೇಕು ; ಸರಿ ; ಆದರೆ ಜನರಲ್‌ಗೆ ಇವಳು ಎಂಥ ದಿಟ್ಟೆ ಎಂದು ತುಂಬ ಮೆಚ್ಚು ಗೆಯೂ ಆಯಿತು. ಈ ಮುದಿ ಒಡಲಲ್ಲಿ ರಾಷ್ಟ್ರವನ್ನು ಕುರಿತು ಈ ಪ್ರೇಮ, ಅದರ ಧ್ವಜವನ್ನು ಕುರಿತು ಈ ಭಕ್ತಿ, ಸಾಯಲು ಅಂಜದ ಈ ಕೆಚ್ಚು : ಇದನ್ನು ಅವನು ಬಹಳ ಮೆಚ್ಚಿಕೊಂಡನು. ಅವಳನ್ನು ಕೊಲ್ಲಲು ಅವನಿಗೆ ಮನಸ್ಸು ಬರಲಿಲ್ಲ. " ಈ ನರೆತಲೆಯ ಒಂದು ಎಳೆ ಕೂದಲನ್ನು ಯಾವನಾದರೂ ಸೋಕಿದರೆ ನಾನು ಅವನನ್ನು ನಾಯಿಯ ಸಾವಿಗೆ ಗುರಿ ಮಾಡುತ್ತೇನೆ, ಅವಳ ಗೋಜಿಗೆ ಹೋಗಬೇಡಿ, ನಡೆಯಿರಿ", ಎಂದನು. ನಗರ ಈ ವಿದ್ರೋಹಿಗಳ ಕೈಸೇರಿತು. ಆದರೆ ಬಾರ್‌ಬರಾ ಫ್ರಿಟ್ಚಿಯ ರಾಷ್ಟ್ರಧ್ವಜ ಆಕಾಶದಲ್ಲಿ ಹಾರುತ್ತಲೇ ಇತ್ತು. ಕಥೆ ಆರಂಭವಾಗುವ ಪಂಕ್ತಿಗಳು, ಅದರ ಮುಗಿತಾಯದ ಪಂಕ್ತಿಗಳು ತುಂಬ ಚೆನ್ನಾಗಿವೆ. ಈಗಲೂ ನನಗೆ ಜ್ಞಾಪಕ ಇವೆ. ನಮ್ಮ ದೇಶ, ನಮ್ಮ ಧ್ವಜ ಎಂಬ ಹೆಮ್ಮೆಯ ಭಾವವನ್ನು ನನ್ನ ಮನಸ್ಸಿನಲ್ಲಿ ಮೂಡಿಸಿದ ಶ್ರೇಷ್ಠ ಕವಿತೆ ಇದು ಎಂದು ನಾನು ಈಗಲೂ ಈ ಕೃತಿಯನ್ನು ಪೂಜಿಸುತ್ತೇನೆ.

ಆಮೇಲಿನ ದಿನಗಳಲ್ಲಿ ಪಾಠವಾದ ಷೇಕ್ಸ್‌ಪಿಯರ್, ಮಿಲ್ಟನ್, ಟೆನಿಸನ್, ಬ್ರೌನಿಂಗ್, ನಾನೇ ಆಸೆಯಿಂದ ಓದಿಕೊಂಡ ವರ್ಡ್ಸ್‌ವರ್ತ್, ಷೆಲ್ಲಿ, ಕೋಲೆರಿಡ್ಜ್, ಕೀಟ್ಸ್, ಇವರ ಮತ್ತು ಈಚಿನ ನನ್ನ ಓದಿನ ಪುಸ್ತಕಗಳ ಹೆಸರನ್ನೆಲ್ಲ ಹೇಳುವುದು

ಅನವಶ್ಯಕ. ಷೇಕ್ಸಪಿಯರ್ ಕವಿಯ ಒಂದು ನೂರು ಪಂಕ್ತಿ ಜೀವನವನ್ನು ಕುರಿತು ಸೂಕ್ಷ್ಮ ಸರ್ವಸಮ್ಮತ ಆದ ತತ್ವಜ್ಞಾನವನ್ನು ಮನಕ್ಕೆ ಮುಟ್ಟಿಸಿದವು. ಇತರ ಕವಿಗಳ ನೂರು ವಾಕ್ಯ ಷೇಕ್ಸ್‌ಪಿಯರ್ ಕವಿಯ ವಾಕ್ಯಗಳಿಂದ ಆದ ಪರಿಣಾಮವನ್ನು ಭದ್ರಗೊಳಿಸಿದುವು. ಈ ವಾಕ್ಯಗಳನ್ನೆಲ್ಲಾ ಒಂದು ಉಪನ್ಯಾಸದಲ್ಲಿ ಹೇಳಲು ಸಾಧ್ಯವಲ್ಲ. ಆದರೂ ಜೀವನಕ್ಕೆ ಗುರಿಯನ್ನು ಒದಗಿಸಿದ ಕೆಲವನ್ನು ಹೇಳಬೇಕು. ಇವುಗಳಲ್ಲಿ ಒಂದು 'Beauty is truth; Truth Beauty' ಎಂದು ಮೊದಲಾಗುವ ಈ ಮುನ್ನ ನಾನು ಹೇಳಿದ ಕೀಟ್ಸ್ ಕವಿಯ ಎರಡು ಪಂಕ್ತಿ. ಈ ಪಂಕ್ತಿಗಳನ್ನು ಕುರಿತು ಆಂಗ್ಲ ಸಾಹಿತ್ಯದಲ್ಲಿ ಟೀಕೆ ನಡೆದಿದೆ. ನನಗೆ ಆ ಟೀಕೆ ಈ ವಾದದ ಮಾತೆಲ್ಲ ತಪ್ಪು ಎಂದು ಕಂಡಿದೆ. ಈ ಪಂಕ್ತಿಯನ್ನು ಕುರಿತು ನನ್ನ ಒಂದು ವಿವರಣೆ ಬರೆದಿದ್ದೇನೆ. ಅದರ ಸಾರ ಇದು. ಸಾಹಿತ್ಯ ಧರ್ಮದಂತೆ, ತತ್ವದಂತೆ, ಮಾನವನ ಚೇತನದ ಉದ್ಧಾರಕ್ಕೆ ಸಾಧನ ಆಗಬಲ್ಲದು. ಈ ನಂಬಿಕೆಯ ಕಾರಣದಿಂದ ನಾನು ಸಾಹಿತ್ಯೋಪಾಸನೆಯನ್ನು ನನ್ನ ಜೀವನದ ಮುಖ್ಯವಾದ ಗುರಿಯಾಗಿ ಅಂಗೀಕರಿಸುವುದು ಸಾಧ್ಯ ಆಯಿತು. ಇದರಂತೆ ಚೇತನಕ್ಕೆ ಒಂದು ಧ್ಯೇಯವನ್ನೊದಗಿಸಿದ ಕೆಲವು ಪಂಕ್ತಿ ಬ್ರೌನಿಂಗ್ ಕವಿ ಒಬ್ಬ ವೈಯಾಕರಣಿಯ ಸಾವನ್ನು ಕುರಿತು ಬರೆದ ಪದ್ಯದಲ್ಲಿ ಬರುವ 'This low man sees a little thing to do ; sees it and does it...' ಎಂದು ಆರಂಭವಾಗುವುವು. ಅಲ್ಪವಾದ ಗುರಿಯೊಂದನ್ನಿಟ್ಟುಕೊಂಡು ಅದನ್ನು ಸಾಧಿಸುವುದು ದೊಡ್ಡದಲ್ಲ. ದೊಡ್ಡ ಗುರಿಯನ್ನಿಟ್ಟುಕೊಂಡು ಸೋಲುವುದು ಕೇಡಲ್ಲ. ಅಲ್ಪ ಲಕ್ಷ್ಯವನ್ನು ಸಾಧಿಸಿದವನು ಈ ಲೋಕದಲ್ಲಿ ಸುಖ ಕಾಣಬಹುದು. ಇಷ್ಟರಿಂದ ಆತ್ಮ ಉದ್ಧಾರ ಆಗುವುದಿಲ್ಲ. ಇದಾಗಬೇಕಾದರೆ ಗುರಿ ದೊಡ್ಡದಾಗಿರಬೇಕು. ಅದನ್ನು ಸಾಧಿಸಲು ಅಜೇಯ ಯತ್ನ ನಡೆಯಬೇಕು. 'Hitch your wagon to a star,' 'Low aim is crime,' ಎನ್ನುವುದು ಇದೇ ಅರ್ಥದ ಇತರ ವಾಕ್ಯಗಳು.

ಹೀಗೆ ಆಲೋಚನೆಯ ಕ್ಷೇತ್ರವನ್ನೇ ವಿಸ್ತಾರಗೊಳಿಸಿದ ಇನ್ನು ಕೆಲವು ಪಂಕ್ತಿ ಅಷ್ಟೇನೂ ಹಿರಿಯರಲ್ಲದ ಕೆಲವು ಕವಿಗಳವು. ಆ ಕವಿಗಳು ಬಹು ಹಿರಿಯರಲ್ಲ, ಆದರೂ ಅವರ ಈ ವಾಕ್ಯಗಳು ನನ್ನ ಜೀವನದಲ್ಲಿ ಬೆಳಕಾಗಿ ನಿಂತು ನನ್ನನ್ನು ನಡೆಸಿದೆ. ತಾನು ಸೃಷ್ಟಿ ಆದ ದಿನ ಹಗಲು ಮುಗಿದು ಇರುಳಾದಾಗ ಮನುಷ್ಯ "ಬೆಳಕು ಹೋಯಿತೇ, ಇನ್ನೇನು ಗತಿ?" ಎಂದು ಹೆದರಿರಬೆಕು. ಆದರೆ ಆ ಇರುಳಲ್ಲಿ ಸೂರ್ಯ ಮರೆಯಾಗಿ ಸಾವಿರ ನಕ್ಷತ್ರ, ಒಂದು ಚಂದ್ರ ಕಣ್ಣಿಗೆ ಕಂಡವು. ಬೆಳಕು ಎಲ್ಲ ಹೊತ್ತೂ ಎಲ್ಲ ವಸ್ತುಗಳನ್ನೂ ತೋರಿಸುವುದಿಲ್ಲ. ಕೆಲವು ವೇಳೆ ಅದು ಏನಿದೆ ಅದನ್ನು ಮರೆ ಮಾಡುತ್ತದೆ. 'If light can thus deceive then why not life?' ಎಂದ ಮೇಲೆ ಸಾವಿಗೆ ಅಂಜಲೇಕೆ? ಇದು ಬ್ಲ್ಯಾಂಕೊ ವೈಟ್ ಎಂಬ ಕವಿಯ ಒಂದು ಪದ್ಯದ ವಸ್ತು. ಈ ಭಾವದ ಒಂದು ವಾಕ್ಯ ರವೀಂದ್ರನಾಥರ ಗೀತಾಂಜಲಿಯಲ್ಲಿ.

ಇವೆ. The child cries when the mother takes it away from the right breast to find the next moment its consolation in the left one. ಪ್ರಕೃತಿಮಾತೆಯ ಬಲಎದೆ ಜೀವನ; ಎಡಎದೆ ಸಾವು; ಇವರಲ್ಲಿ ಹಾಲಿರುವಂತೆ ಅದರಲ್ಲೂ ಹಾಲಿದೆ. ಇದೇ ಭಾವವನ್ನು ಮೆರೆಡಿತ್ ಕವಿ ತನ್ನ ಒಂದು ಪದ್ಯದಲ್ಲಿ ಹೀಗೆ ನುಡಿದರು: 'Unto the breast that bears this rose; Shall I ashuddering fall?' ಗುಲಾಬಿಯಂಥ ಸುಂದರ ಮೃದು ವಸ್ತುವನ್ನು ಹಡೆಯುವ ನೆಲ ಕ್ರೂರ ಆಗಿರಲಾರದಲ್ಲ. ಅದರಲ್ಲಿ ಹುದುಗಬೇಕಾಗುತ್ತದೆಂದು ನಾನು ನಡುಗ ಬೇಕೇ? ಈ ವಾಕ್ಯಗಳಿಂದ ನನ್ನ ಮನಸ್ಸಿಗೆ ಸಾವನ್ನು ಕುರಿತು ಕಲ್ಪನೆ ಒಂದು ಬಂದಿದೆ; ಆ ಕಲ್ಪನೆ ನನ್ನ ಹಿರಿಯರು ಸಾವಿನ ಎದುರಲ್ಲಿ ನಡೆದುಕೊಂಡ ರೀತಿಯಿಂದ ಮನಸ್ಸಿನಲ್ಲಿ ಮೂಡಿದ ಒಂದು ಭಾವನೆಯನ್ನು ಸ್ಥಿರಪಡಿಸಿದೆ.

ಜೀವನವನ್ನು ಕುರಿತೇ ಕೆಲವು ಮುಖ್ಯಭಾವನೆ ನನಗೆ ಇಂಥ ಕವಿಗಳಿಂದ ಬಂದಿದೆ. ಇವುಗಳಲ್ಲಿ ಒಂದು ಲೇ ಹಂಟ್ ಕವಿಯ Abu ben Adhem ಕವಿತೆ. ಸಜ್ಜನ ಅಬೂ ಬೆಳದಿಂಗಳ ಒಂದು ರಾತ್ರೆ ಶಾಂತವಾಗಿ ನಿದ್ರಿಸುತ್ತಿದ್ದು ಎಚ್ಚೆತ್ತ ಹೊತ್ತು, ಕೋಣೆಯನ್ನು ದಿವ್ಯಪ್ರಭೆಯಿಂದ ತುಂಬಿದ್ದ ಒಂದು ದೇವಮೂರ್ತಿ ಎದು ರಲ್ಲಿ ಕುಳಿತು ಒಂದು ಪುಸ್ತಕದಲ್ಲಿ ಏನೋ ಬರೆಯುತ್ತಿರುವುದನ್ನು ನೋಡಿದನು. ಪೂರ್ಣಶಾಂತಿಯ ಕಾರಣ ಅಬೂ ನಿರ್ಭಯನಾಗಿದ್ದನು. ದಿವ್ಯಮೂರ್ತಿಯನ್ನು, "ನೀನು ಬರೆಯುತ್ತಿರುವುದೇನು?" ಎಂದು ಕೇಳಿದನು. ಮೂರ್ತಿ ತಲೆಯೆತ್ತಿ, "ದೇವರನ್ನು ಪ್ರೀತಿಸುವವರ ಹೆಸರುಗಳನ್ನು ಬರೆಯುತ್ತಿದ್ದೇನೆ" ಎಂದಿತು. "ಅವು ಗಳಲ್ಲಿ ನನ್ನ ಹೆಸರು ಇದೆಯೇ?" "ಇಲ್ಲ." "ಒಳ್ಳಿತು ನನ್ನ ಹೆಸರನ್ನು ತನ್ನ ಜೊತೆಯ ಮಾನವರನ್ನು ಪ್ರೀತಿಸಿದವನು ಎಂದು ಬರೆದುಕೋ." ದಿವ್ಯಮೂರ್ತಿ ಅದೇನನ್ನೋ ಬರೆದುಕೊಂಡಿತು. ಕಣ್ಣಿಂದ ಮರೆಯಾಯಿತು. ಮರುದಿನ ರಾತ್ರಿ ಅದು ಮತ್ತೆ ಬಂದಿತು. ತನ್ನ ಬರೆಹದ ಪುಟವನ್ನು ಅಬೂ ಕಣ್ಣೆದುರಿಗೆ ಹಿಡಿದು ತೋರಿಸಿತು. ಅಯ್ಯಾ ಏನಾಶ್ಚರ್ಯ! ದೈವ ಪ್ರೇಮಿಗಳ ಹೆಸರುಗಳ ಪಟ್ಟಿಯ ಮೊದಲ ಹೆಸರು ಮಾನವ ಪ್ರೇಮಿ ಅಬೂವಿನ ಹೆಸರಾಗಿತ್ತು.

ಹೀಗೆ ಬೇರೆ ರೀತಿಯಲ್ಲಿ ನಾನು ಧೈರ್ಯ ಪಡೆಯಲು ಸಹಾಯಕವಾದ ಪದ್ಯ ಗಳು ಹೆನ್ಲೀ ಅವರ

Out of the night that covers me

ಎಂದು ಮೊದಲಾಗುವ ಆತ್ಮಾವಲಂಬನದ ಪದ್ಯ; ಎಮಿಲಿ ಬ್ರಾಂಟೆ ಅವರ

'No coward soul is mine'

ಎಂದು ಮೊದಲಾಗುವ ಆತ್ಮಸಮರ್ಪಣೆಯ ಪದ್ಯ; ಫ್ರಾನ್ಸಿಸ್ ಥಾಮ್‌ಸನ್‌ರ

'O world invisible, we view thee'

ಎಂದು ಮೊದಲಾಗುವ ದರ್ಶನದ ಪದ್ಯ. ಐರಿಷ್ ಕವಿ ರಸೆಲ್‌ರವರ ಅನೇಕ ಪದ್ಯ ನನಗೆ ತುಂಬ ಸಂತೊಷ ಕೊಟ್ಟವೆ. ದೃಷ್ಟಿಯನ್ನು ನೀಡಿವೆ. ಅವರ ಈ ನಾಲ್ಕು ಪಂಕ್ತಿ ಇಂಥವು:

This vision give to me, no throne
No heaven; yet I shall rejoice
Knowing beneath my feet a star,
Thy word in every wandering voice

ಭೂಮಿಯನ್ನು ದೇವಿ ಎಂದು ಭಾವಿಸುವುದು ನಮ್ಮ ಜನಕ್ಕೆ ಹೊಸತಲ್ಲ. ತಾರೆಗಳಂತೆ ಬೆಳಕಿನ ಖಂಡವೊಂದು ಆಗಿದ್ದು ನಮ್ಮ ಭೂಮಿ ಬೆಳಕು ಉಣ್ಣುವ ಬಂಜೆತನವನ್ನು ತೊರೆದು ತಂಪು ಮಣ್ಣಿನ ಗೋಲ ಆಗಿ ನಮ್ಮ ತಾಯಿ ಆಯಿತು. ಈ ಅರ್ಥ ನಮ್ಮ ಪೂರ್ವಿಕರ ಭಾವದಲ್ಲಿ ಸೇರಿತ್ತು ಎನ್ನಲಾಗುವುದಿಲ್ಲ. ಜೀವ ಕೊಡಲು ನಮ್ಮ ತಾಯಿ ಎಂಥ ತ್ಯಾಗ ಮಾಡಿದಳು! ರಸೆಲ್ ಕವಿಯ ಪಂಕ್ತಿಗಳು ನಮ್ಮ ಮನಸ್ಸಿಗೆ ಇದರ ಅರಿವನ್ನು ತರುತ್ತವೆ. ನಮ್ಮ ಕಾಲಡಿಯ ಈ ನೆಲ ಒಂದು ತಾರೆ. ಇದರ ಜೀವನದ ಪರಿಕರವೆಲ್ಲ ದಿವ್ಯತತ್ವದ ವ್ಯಂಜನಗಳು.

ಹೀಗೆಯೇ ನನ್ನ ಮನಸ್ಸಿಗೆ ಬಂದಿದ್ದ ಒಂದು ಭಾವವನ್ನು ಕಿಪ್ಲಿಂಗ್ ಹೇಳಿದ್ದಾನೆ. ಕಿಪ್ಲಿಂಗ್ ತಕ್ಕಷ್ಟು ಶಕ್ತಿಯ ಕವಿ; ಆಂಗ್ಲ ಸಾಮ್ರಾಜ್ಯದ ಕವಿಯಾಗಿ ಅವನು ಭರತವರ್ಷವನ್ನು ಹೀಯಾಳಿಸಿದ್ದು ನಮಗೆಲ್ಲ ಬೇಸರ. ಇವರ ಒಂದು ಪಂಕ್ತಿ

Oh East is East and West is West and
Never the twain shall meet.

ಇದನ್ನು ಓದಿದಾಗ ಇದೇನು ಅಹಂಕಾರ ಎನಿಸುತ್ತದೆ. ಈ ಪಂಕ್ತಿಯ ಮುಂದಿನ ಪಂಕ್ತಿಗಳಲ್ಲಿ ಧೀರರಿಬ್ಬರು ಎದುರಾದಾಗ ಈ ಭೇದ ಅಳಿಯುತ್ತದೆ ಎಂಬ ಮಾತಿದೆ. ಆದರೆ ಈ ಮುಂದಣ ಪಂಕ್ತಿಗಳಿಂದ ನಮಗೆ ಮೊದಲಲ್ಲಿ ಆದ ಬೇಸರ ಶಮನ ಆಗುವುದಿಲ್ಲ. "ಪೂರ್ವ ಪೂರ್ವವೇ, ಪಶ್ಚಿಮ ಪಶ್ಚಿಮವೇ" ಎಂದು ಹೆಮ್ಮೆಪಡುವ ಕವಿ ಒಂದು ಕಡೆ "ನನ್ನ ಕೃತಿಯಲ್ಲಿ ಏನಾದರೂ ಗುಣ ಇರುವುದೇ, ನನ್ನೊಡೆಯ, ಅದು ನೀನು ಬಲವಂತ ಮಾಡಿ ಬರೆಸಿದ್ದು; ದೋಷ ಇದೆಯೊ? ಅದರ ಕಾರಣ ನನ್ನ ಅಲ್ಪತನ," ಎನ್ನುತ್ತಾನೆ. ಎಂದರೆ ಈ ಕವಿ ತನ್ನ ಯೋಗ್ಯತೆಗೆ ದೈವ ಕಾರಣ ಎನ್ನುವ ಸತ್ಯವನ್ನು ಕಂಡುಕೊಂಡನು. ಕವಿಗಳಾದವರು ಈತನ ಈ ಅನುಭವವನ್ನು ತಮ್ಮ ಅನುಭವವನ್ನಾಗಿ ಮಾಡಿಕೊಳ್ಳುವುದು ಒಳ್ಳೆಯದು.

ಭಾವ ಹೇಗೆ ಹಾಗೆ ನನಗೆ ನನ್ನ ಗುರುಗಳಾದ ಈ ಕವಿಗಳಿಂದ ರೀತಿಯಲ್ಲಿಯೂ ಪಾಠ ಆಗಿದೆ. ಲಕ್ಷ್ಮೀಶ ಕವಿಯ "ಅಸತೀ ಕುಸುಮ ಗಾತ್ರನಂ ಕಮಲನೇತ್ರನಂ" ಎಂದು ಮೊದಲಾಗುವ ಪದ್ಯ; ಟೆನಿಸನ್ ಕವಿಯ The splendour falls on

canal walls ಎಂದು ಮೊದಲಾಗುವ ಪದಗಳ ಜೋಡಣೆಯಿಂದ ಮೂಡುವ ಸೌಂದರ್ಯ, ಇವು ಇದಕ್ಕೆ ಉದಾಹರಣೆ. ಸ್ಪಷ್ಟವಾದ ಈ ಸೌಂದರ್ಯದಂತೆ ಭಾಷೆಯ ಇತರ ರೀತಿಯ ಚೆಲುವಿನ ಕಲ್ಪನೆಯೂ ನಮಗೆ ಸಾಹಿತ್ಯದಿಂದ ದೊರೆಯುತ್ತದೆ. ಕಾವ್ಯ ಬೆಳೆದು ಜನದಲ್ಲಿ ಹರಡಿ ನಮ್ಮ ದಿನದ ಮಾತಿಗೆ ಬಣ್ಣವನ್ನು ಕೊಟ್ಟಿದೆ, ಅದರಲ್ಲಿ ಈ ಚೆಲುವನ್ನು ತುಂಬಿದೆ. ಈ ವಿಷಯವನ್ನು ಇಲ್ಲಿ ಮತ್ತಷ್ಟು ವಿವರಿಸಿ ಹೇಳಲು ಅವಕಾಶವಿಲ್ಲ.

ಇಷ್ಟೆಲ್ಲಾ ಮಾತಿನನಂತರ ಒಂದು ಮಾತನ್ನು ಒತ್ತಿ ಹೇಳಬೇಕು. ಕಾವ್ಯ ಮನುಷ್ಯನನ್ನು ಅವನಿಗೆ ಸಹಜವಾದ ಸರಳತೆಯ ಕಡೆಗೆ ಸೆಳೆಯುತ್ತದೆ. ಮೊದಲು ಕಂಡಾಗ ಸುಖ ಕೊಟ್ಟು ಮತ್ತೆ ಮತ್ತೆ ನೋಡಿದ ಕಾರಣದಿಂದ ಆ ಸುಖವನ್ನು ಕೊಡಲಾರದೆ ಹೋದ ಪ್ರಕೃತಿ ಸೌಂದರ್ಯ ಕಾವ್ಯದ ಮಹಿಮೆಯಿಂದ ಮತ್ತೆ ಕಣ್ಣಿಗೆ ಕಾಣುವಂತಾಗುತ್ತದೆ. ಎಂದರೆ ಕಾವ್ಯ ಜೋಮು ಹಿಡಿದಿರುವ ಚೇತನದ ಜೋಮನ್ನು ಬಿಡಿಸುತ್ತದೆ. ಪ್ರಕೃತಿ ಸೌಂದರ್ಯದಂತೆ ಉಳಿದ ಸೌಂದರ್ಯವನ್ನು ಗ್ರಹಿಸುವ ಶಕ್ತಿಯನ್ನು ನಮಗೆ ಕೊಡುತ್ತದೆ. ನಮ್ಮನ್ನು ಹೀಗೆ ಪೂರ್ಣಮಾನವರನ್ನಾಗಿ ಮಾಡುತ್ತದೆ. ಈ ಪೂರ್ಣತೆಯ ಒಂದು ಭಾಗ ಯೋಚನೆಯ, ಮಾತಿನಲ್ಲಿ ಉನ್ನತವಾದದ್ದನ್ನು ಬಯಸುವುದರಲ್ಲಿ ರೂಪುಗೊಳ್ಳುತ್ತದೆ.

ಇದರಿಂದ ನಮಗೆ ಉನ್ನತ ನೀತಿ, ಉದಾತ್ತಭಾವ ಅವಶ್ಯ ಆಗುತ್ತದೆ. ನಾನು ಓದಿದ ಕಾವ್ಯಗಳಿಂದ ನನ್ನ ಜೀವನದಲ್ಲಿ ಈ ಪರಿಣಾಮ ಆಯಿತು. ಈ ಕಾವ್ಯಗಳು ನನಗೆ ಸೌಂದರ್ಯದ ಸ್ವರೂಪವನ್ನು ನೀತಿಯ ನೆಲೆಯನ್ನು, ಜೀವನದ ಧ್ಯೇಯವನ್ನು ಕಲ್ಪಿಸಿ ಕೊಟ್ಟಂತೆ ನನ್ನಲ್ಲಿದ್ದ ಕಾವ್ಯಶಕ್ತಿ ಅರಳುವುದಕ್ಕೂ ಕಾರಣ ಆದವು. ಇವುಗಳ ಪಾಠದಿಂದ ನಾನು ನನ್ನ ಅನುಭವವನ್ನು ಕಾವ್ಯವಾಗಿ ಹೇಳುವ ಪ್ರೇರಣೆಯನ್ನು ಪಡೆದೆನು. ಇಷ್ಟೋ ಅಷ್ಟೋ ಕವಿಗುಣ ಇದ್ದದ್ದರಿಂದ ನಾನು ಬರೆದ ಕೃತಿ ಇಷ್ಟೋ ಅಷ್ಟೋ ಗುಣದ ಕವಿತೆ ಆಯಿತು. ಮಿತ್ರರು ನನ್ನನ್ನು ಕವಿ ಎಂದು ಕರೆದರು, ನನ್ನ ಬರಹವನ್ನು ಒಪ್ಪಿಕೊಂಡರು. ನನ್ನ ಜೀವನದಲ್ಲಿ ಕಾವ್ಯದಿಂದ ಆದ ಕೆಲಸದಲ್ಲಿ ಇದೂ ಒಂದು ಭಾಗ.

೭

ಕಾವ್ಯದಿಂದ ಒಂದು ಜೀವನದಲ್ಲಿ ಆದ ಕೆಲಸದ ಈ ವಿವರಣೆ ಈ ಸಂದರ್ಭದಲ್ಲಿ ಪ್ರಕೃತ ಆಗುವುದು ಹೀಗೆ. ಸಾವಿರಕಾಲದಿಂದ ಸೃಷ್ಟಿಯಾಗುತ್ತಾ ಬಂದಿರುವ ಕಾವ್ಯ ಅದರದರ ಸ್ಥಳದಲ್ಲಿ, ಅದರದರ ದಿನದಲ್ಲಿ, ಆಮೇಲಿನ ದಿನದಲ್ಲಿ, ಅದರ ಪ್ರಭಾವಕ್ಕೆ ಒಳಗಾದ ಜೀವನಗಳಲ್ಲಿ ಇದೇ ಮಾರ್ಪಾಡನ್ನು ಮಾಡಿರುತ್ತದೆ. ಧರ್ಮ, ಧರ್ಮ

ಎಂದು ಉಪದೇಶಿಸುವ ಸಂಗತಿಯನ್ನು ತತ್ವ, ತತ್ವ ಎಂದು ವಿವರಿಸುವ ಸಂಗತಿಯನ್ನು, ಕಾವ್ಯ ರಸಯುಕ್ತವಾದ ಮಾತಿನಲ್ಲಿ ರುಚಿಸುವಂತೆ ತಿಳಿಸಿಕೊಟ್ಟು, ಜನಸಮುದಾಯದ ಜೀವನಕ್ಕೆ ಬೆಳಕಾಗಿ ಒದಗಿಸಿದೆ. ಒಂದು ಜೀವನದಲ್ಲಿ ಆದ ಸಂಸ್ಕಾರ ಲಕ್ಷಾಂತರ ಜೀವನದಲ್ಲಿ ಆದಾಗ, ನಾನು ಈ ಮುನ್ನ ವಿಜ್ಞಾಪಿಸಿದಂತೆ, ಒಟ್ಟು ಜನತೆಯೇ ಸಂಸ್ಕೃತಿಯಲ್ಲಿ ಮೇಲ್ಮಟ್ಟವನ್ನು ಮುಟ್ಟುತ್ತದೆ. ಪರಿಷ್ಕೃತವಾದ ಬಾಳನ್ನು ಬಾಳುತ್ತದೆ. ದಿಟವಾದ ಸೌಖ್ಯವನ್ನು ಕಾಣುತ್ತದೆ. ಇದು ಉನ್ನತ ಕಾವ್ಯದಿಂದ ಜನಾಂಗದ ಜೀವನದಲ್ಲಿ ಆಗುವ ಕೆಲಸ.

ಈ ಐವತ್ತು ವರ್ಷದಲ್ಲಿ ನಮ್ಮ ನಾಡಿನಲ್ಲಿ ಕಾವ್ಯದಿಂದ ಆಗಿರುವ ಇಂಥ ಕೆಲಸ ಯಾವುದೆಂದು ಹೇಳಲು ನನಗೆ ಅಪೇಕ್ಷೆ. ಆದರೆ ಅದಕ್ಕೆ ಇಲ್ಲಿ ಹೊತ್ತಿಲ್ಲ. ಅದನ್ನು ಬೇರೆ ಸಂದರ್ಭದಲ್ಲಿ ಹೇಳಬಹುದು.

ಕರ್ಣಾಟಕ ನಮಗೆ ತಿಳಿದಿರುವಂತೆ ಸಾವಿರದ ಐನೂರು ವರ್ಷಗಳಿಂದ ಬಹು ಹಿರಿಯದಾದ ಕಾವ್ಯ ಸಂಪ್ರದಾಯ ಒಂದನ್ನು ಬೆಳೆಸಿಕೊಂಡು ಬಂದಿದೆ. ಆ ಸಂಪ್ರದಾಯ ನಮ್ಮ ಪಿತ್ರಾರ್ಜಿತ ಆಸ್ತಿ. ಕನ್ನಡದಂತೆ ನಮ್ಮ ರಾಷ್ಟ್ರದ ಇತರ ಭಾಷೆಗಳೂ ಹತ್ತಿರ ಹತ್ತಿರ ಇಷ್ಟು ಕಾಲದ ಕಾವ್ಯ ಸಂಪ್ರದಾಯಗಳನ್ನು ಬೆಳೆಸಿಕೊಂಡು ಬಂದಿವೆ. ಇವೆಲ್ಲದರ ಮೂಲದಲ್ಲಿ ವೇದಗಳ ಕಾಲದ, ಉಪನಿಷತ್ಕಾಲದ, ಪುರಾಣಗಳ ಕಾಲದ, ಸಂಪ್ರದಾಯದ ಸಾರ ಇದೆ. ನಮ್ಮ ಪೂರ್ವಿಕರು ಒಂದು ಕಾಲದಲ್ಲಿ ಕಂಡುಕೊಂಡು ಕೂಗಿ ಹೇಳಿದ ಮೂಲ ತತ್ತ್ವಗಳು ಎಲ್ಲ ಕಾಲಕ್ಕೂ ಅನ್ವಯಿಸುವಂಥವು. ಅವು ಎಂದಿನಂತೆ ಇಂದೂ ಬೆಲೆ ಉಳ್ಳವಾಗಿವೆ. ಕಾಲ ಬೇರೆ ಆಯಿತೆಂಬ ಕಾರಣದಿಂದ ಅವುಗಳ ಯೋಗ್ಯತೆ ಕಡಿಮೆ ಆಗಿಲ್ಲ, ಆಗುವುದೂ ಇಲ್ಲ. ಸದ್ಯದ ನಮ್ಮ ಜೀವನವನ್ನು ನೋಡುವಲ್ಲಿ ಒಂದು ಜನಾಂಗವಾಗಿ ನಾವು ಕೆಟ್ಟುಹೋಗಿದ್ದೇವೋ ಎಂದು ಭಯವಾಗುತ್ತದೆ. ನಿಜ. ಆದರೆ ಇದು ಮೇಲುಗಡೆ, ಹೊರಗಡೆ, ಕಾಣುವಷ್ಟರಿಂದ ಮೂಡುವ ಭಯ. ನಮ್ಮ ಆಂತರ್ಯ ಇನ್ನೂ ತೀರ ಕೆಟ್ಟಿಲ್ಲ. ಅದು ಇನ್ನಷ್ಟು ಕೆಡದಂತೆ ನಾವು ನೋಡಿಕೊಳ್ಳಬೇಕು. ಲೋಕದ ಚರಿತ್ರೆಯಲ್ಲಿ ಭರತವರ್ಷ ವಹಿಸಬೇಕಾದ ಪಾತ್ರ ಒಂದಿದೆ ಎಂದು ನಮ್ಮಂಥವರು ನಂಬಿದ್ದೇವೆ. ಲೋಕವೆಲ್ಲ ಸತ್ಯ, ಧರ್ಮ, ನೀತಿ ಎಂಬ ಮೂಲ ತತ್ತ್ವಗಳನ್ನು ಒಪ್ಪುತ್ತದೆ. ಲೋಕದ ಎಲ್ಲ ರಾಷ್ಟ್ರಗಳಲ್ಲೂ ಇವನ್ನು ಕುರಿತು ಹಿರಿಯ ಜನ ಆಗಾಗ ನಮ್ಮ ಹಿರಿಯರು ಹೇಳಿಕೊಂಡು ಬಂದ ಮಾತನ್ನೇ ಹೇಳಿಕೊಂಡು ಬಂದಿದ್ದಾರೆ. ಅಲ್ಲಿಯ ಪರಿಸ್ಥಿತಿಯಿಂದ ಅಲ್ಲಿ ಅವರ ಭಾವಗಳಿಗೆ ತಕ್ಕಷ್ಟು ಬೆಂಬಲ ದೊರೆಯದೆ ಹೋಗಬಹುದು. ಅಂಥ ವೇಳೆ ಆ ರಾಷ್ಟ್ರಗಳಿಗಿಂತ ದೀರ್ಘಕಾಲದ ಅನುಭವವುಳ್ಳ ನಮ್ಮ ರಾಷ್ಟ್ರ ಅಲ್ಲಿಯ ಹಿರಿಯರ ಮಾತಿಗೆ ನಮ್ಮ ಹಿರಿಯರ ಮಾತನ್ನು ಜೋಡಿಸಿ ಲೋಕದ ಸಂಪ್ರದಾಯ ಉನ್ನತವಾಗಿ ಉಳಿಯುವಂತೆ ಮಾಡಬೇಕು. ಇದೇ ವಿಷಯವನ್ನು ಧರ್ಮದ ಹೆಸರಿಂದ ಹೇಳ ಹೋದರೆ ಆ ಜನ, ಈ ಶುಷ್ಕ ವಾದ ಬೇಡ ಎನ್ನುತ್ತಾರೆ. ಕಾವ್ಯವಾಗಿ, ಸಾಹಿತ್ಯದ

ಇತರ ರೂಪದ ಕೃತಿಯಾಗಿ, ಸಾಹಿತಿ ಅದೇ ಧರ್ಮ ಅದೇ ತತ್ವವನ್ನು ರುಚಿಸುವಂತೆ ಹೇಳಿದರೆ ಅದನ್ನು ಲೋಕವೆಲ್ಲ ಒಪ್ಪುತ್ತದೆ. ನಮ್ಮ ರಾಷ್ಟ್ರ ಲೋಕಜೀವನದಲ್ಲಿ ತನ್ನ ಕಾವ್ಯದಿಂದ ಈ ಫಲವನ್ನು ಸಾಧಿಸಬೇಕಾಗಿದೆ. ಇದೇ ಕಾವ್ಯದಿಂದ ಆಗಬೇಕಾಗಿರುವ ಕೆಲಸ. ಕಾವ್ಯದಿಂದ ಆಗುವ ಕೆಲಸ.

೮

ನನ್ನ ಈ ಮಾತು ನಾನು ಉದ್ದೇಶಿಸಿದ್ದದ್ದಕ್ಕಿಂತ ಹೆಚ್ಚು ಹೊತ್ತು ತೆಗೆದು ಕೊಂಡಿತು. ಆದರೂ ತಾವು ಅದನ್ನು ಅಕ್ಕರೆಯಿಂದ ತಾಳ್ಮೆಯಿಂದ ಕೇಳಿದೀರಿ. ಇದಕ್ಕಾಗಿ ತಮಗೆಲ್ಲ ವಂದನೆ.

ಪ್ರಭಾ ಮುದ್ರಣಾಲಯ, ಬೆಂಗಳೂರು-4

ಪ್ರಕಟನೆಗಳು

		ರೂ.	ಪೈ.
1	ಬಾಳಿಗೊಂದು ನಂಬಿಕೆ — ಡಿ. ವಿ. ಜಿ.		
2	ರಾಜ್ಯಶಾಸ್ತ್ರ — ಡಿ. ವಿ. ಜಿ.		
3	ಮಹಾತ್ಮ ಗಾಂಧಿ (ಜ್ಞಾಪಕ ಪದ್ಯಸಂಗ್ರಹ) — ಡಿ. ವಿ. ಜಿ.	0	25
4	ದಾದಾಭಾಯಿ ನವರೋಜಿ — ಡಿ. ವಿ. ಜಿ.	0	25
5	ಶ್ರೀ ಬಾಹುಬಲಿ ವಿಜಯ ಮತ್ತು ಗೊಮ್ಮಟ ಶಿಲ್ಪ — ಜಿ. ಪಿ. ರಾಜರತ್ನಂ	1	50
6	ಇಂಡಿಯದ ಭಾಷಾ ಪ್ರಶ್ನೆ — ಡಿ. ವಿ. ಜಿ.	0	25
7	ವಾಲ್ಮೀಕಿಮುನಿಗಳ ಹಾಸ್ಯಪ್ರವೃತ್ತಿ — ವಿದ್ವಾನ್ ಎನ್. ರಂಗನಾಥಶರ್ಮಾ	1	00
8	ಕಾವ್ಯದಿಂದ ಆಗುವ ಕೆಲಸ — ಮಾಸ್ತಿ ವೆಂಕಟೇಶ ಅಯ್ಯಂಗಾರ್	1	00
9	ಸಾರ್ವಜನಿಕದಲ್ಲಿ ಸಾತ್ತ್ವಿಕ * — ಡಿ. ವಿ. ಜಿ.		
10	ಶಾಸನ ಸಂಸ್ಥೆಯ ಕಾರ್ಯವಿಧಾನ * — ಟಿ. ಹನುಮಂತಪ್ಪ		
11	ನಮ್ಮ ಜನ ನಡಸಿದ ಜೀವನ * — ತಿರುಮಲೆ ತಾತಾಚಾರ್ಯ ಶರ್ಮನ್		

ಸಾಮಾನ್ಯ ಜನಕ್ಕೆ ಸುಲಭ ಶೈಲಿಯಲ್ಲಿ ಉಪಯುಕ್ತ ವಿಷಯಗಳನ್ನು ತಿಳಿಸಬೇಕೆಂಬುದು ಈ ಗ್ರಂಥಮಾಲೆಯ ಉದ್ದೇಶ.

ಮಹಾಜನರು ಈ ಪ್ರಕಟನೆಗಳಿಗೆ ಉದಾರವಾಗಿ ಪ್ರೋತ್ಸಾಹ ಕೊಟ್ಟು ಇಂಥ ಸಾಹಿತ್ಯಾಭಿವೃದ್ಧಿಗೆ ನೆರವಾಗಬೇಕೆಂದು ಬೇಡುತ್ತೇವೆ.

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ
ಬೆಂಗಳೂರು-4

* ಅಚ್ಚಿನಲ್ಲಿದೆ